

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

Volume : 07 | Issue : 228 | Tuesday 20-05-2025 | E-mail : maruti.b.hosamani76@gmail.com | Page: 4 | Price : Rs. 1/-


## ದಲಿತ ಕುಟುಂಬದ ಮೇಲೆ ಹಲ್ಲೆ ಮಾಡಿರುವ ಆರೋಪಿಗಳನ್ನು 5 ದಿನ ಕಳೆದರು ಕೂಡ ಬಂಧಿಸಿದ ಕಾರಣ ತಾಲೂಕ ಡಿಎಸ್ ಎಸ್ ಸಮಿತಿಯಿಂದ ಪೊಲೀಸ್ ಇಲಾಖೆ ಮುಂದೆ ಸತ್ಯಾಗ್ರಹ

**ಸಿಹಿ ಕಹಿ ಸುದ್ದಿ,**

**ರೋಣ :** ಗದಗ ಜಿಲ್ಲೆಯ ರೋಣ ತಾಲೂಕಿನ ಸವಡಿ ಗ್ರಾಮದ ದಲಿತ ವಿವಾಹಿತಿ ಅಕ್ಷತಾ ಹುನಸಿಮರದ 4. ವರ್ಷದ ಇಂದೇ ಮೇಲ್ಜಾತಿಯ ಗಾಣಿಗ ಸಮುದಾಯಕ್ಕೆ ಸೇರಿದ ಮಂಜುನಾಥ್ ಈರಪ್ಪ ಕಟಗಿ ಎಂಬ ಯುವಕನ ಜೊತೆ ಇವರಿಬ್ಬರು ಮನ:ಸತ್ಪೂರ್ವಕವಾಗಿ ಪ್ರೀತಿಸಿ ಅಂತರ್ ಜಾತಿ ವಿವಾಹ ಆಗಿರುತ್ತಾರೆ ಪ್ರೀತಿಸಿ ಮದುವೆ ಆದ ದಲಿತ ಸಮುದಾಯದ ಅಕ್ಷತಾ ಮತ್ತು ಮೇಲ್ಜಾತಿಯ ಸಮುದಾಯದ ಮಂಜುನಾಥ ಇವರು 2 ಹೆಣ್ಣು ಮಕ್ಕಳೊಂದಿಗೆ ಅನ್ಯೋನ್ಯವಾಗಿ ಜೀವನ ಸಾಗಿಸುತ್ತಿರುತ್ತಾರೆ ಅಕ್ಷತಾಳ ಗಂಡ ಟ್ರ್ಯಾಕ್ಟರ್ ಡ್ರೈವರ್ ನಾಗಿ ಜೀವನ ಸಾಗಿಸುತ್ತಿರುತ್ತಾನೆ.

ಅಂತರ್ ಜಾತಿ ವಿವಾಹ ಆಗಿದ್ದ-ಕ್ಕೆ ಗಾಣಿಗ ಸಮುದಾಯದ ಮಂಜುನಾಥ್ ನ ಸಮುದಾಯದವರು ದಿನಾಂಕ 14/05/2025 ಬುಧವಾರ ರಂದು ಚಿಕ್ಕಮನ್ನೂರು ಗ್ರಾಮದಲ್ಲಿ ಇರುವ ರಾಜುಗೌಡ ಪಾಟೀಲ್ ಪೆಟ್ರೋಲ್ ಪಂಪ್ ಗೆ ಮಧ್ಯಾಹ್ನ 12.30 ಸುಮಾರಿಗೆ ರಾಜುಗ-ೌಡ ಪಾಟೀಲ್.ತಿಪ್ಪನಗೌಡ ಹುಲ್ಲೂರು.ವೀರನಗೌಡ ಬಂಗ್ಲಿ. ಪುಲಿಕೇಶಗೌಡ ಬಂಗ್ಲಿ. ಗೌಡಪ್ಪಗೌಡ ಪಾಟೀಲ. ಕೃಷ್ಣಾನಗೌಡ.ರಾಮನಗೌಡ ಪಾಟೀಲ್. ಮಲ್ಲಪ್ಪ ಟಕೆದ ಮೇಲ್ಜಾತಿಯ ಗಾಣಿಗ ಸಮುದಾಯಕ್ಕೆ ಸೇರಿದ ಇವರೆಲ್ಲರೂ ಕೂಡಿ ಕೊಂಡು ದಲಿತ ಸಮುದಾಯಕ್ಕೆ ಸೇರಿದ ಅಕ್ಷತಾಳನ್ನು ಮದುವೆ ಆದ ಕಾರಣ ಸಾರ್ವಜನಿಕ ಸ್ಥಳದಲ್ಲಿ ಜಾತಿ ನಿಂದಣೆ ಮಾಡುವುದರೊಂದಿಗೆ ಅಕ್ಷತಾಳ ಗಂಡನಾಡ ಮಂಜುನಾಥ. ಕಟಗಿ ಮತ್ತು ಅಕ್ಷತನ ಅಣ್ಣನಾದ ಮಂಜುನಾಥ ಹುನಸಿಮರದ ಹಾಗೂ ಅನ್ವರಸಾಬ ಈ ನಾಲ್ಕು ಜನರನ್ನು ಪೆಟ್ರೋಲ್ ಪಂಪಿನಲ್ಲಿ ಮನ ಬಂದಂತೆ ಥಳಿಸಿ ಮಾರಣಾಂತಿಕ ಹಲ್ಲೆ ಮಾಡಿರುತ್ತಾರೆ.



ಅಂತರ್ ಜಾತಿ ಮದುವೆ ಆಗಿದ್ದಕ್ಕೆ ದ್ವೇಷದಿಂದ ದಲಿತ ಕುಟುಂಬದ ಮೇಲೆ ಮಾರಣಾಂತಿಕಾ ಹಲ್ಲೆ ಮಾಡಿರುವ ಎಂಟು ಜನ ವಿರುದ್ಧ ದಿನಾಂಕ್ 14/05/2025 ಬುಧವಾರ ರಂದು ರೋಣ ಪೊಲೀಸ್ ಠಾಣಾದಲ್ಲಿ ಎಸ್ಸಿ/ಎಸ್ಟಿ ಪ್ರಕರಣ ದಾಖಲಾಗಿದ್ದು. ಸುಮಾರು 5. ದಿನ ಗತಿಸುತ್ತಾ ಬಂದರು. ಕೂಡ 8. ಜನ ಆರೋಪಿ ಪೈಕಿ 4. ಜನ ಮಾತ್ರ ಬಂಧಿಸಲು ಮಾತ್ರ ರೋಣ ಪೊಲೀಸ್ ಇಲಾಖೆಯವರು ಯಶಸ್ವಿಯಾಗಿದ್ದಾರೆ. ಇನ್ನೂಳಿದ ಆರೋಪಿಗಳನ್ನು ಬಂಧಿಸಿದೆ ಇರುವ ಕಾರಣ ದಿನಾಂಕ್ 18/05/2025 ಭಾನುವಾರ ರಂದು ಇನ್ನೂಳಿದ ಆರೋಪಿಗಳನ್ನು ಬಂಧಿಸಿದೆ ಇರುವದರಿಂದ ರೋಣ ದಲಿತ ಮುಖಂಡರು ಪೊಲೀಸ್ ಇಲಾಖೆ ಮುಂಭಾಗ ಧರಣಿ ಸತ್ಯಾಗ್ರಹ ಮಾಡಲು ಮುಂದಾದ ವಿವಿಧ ದಲಿತ ಸಂಘಟನೆಯ ಮುಖಂಡರು ಮತ್ತು ಯುವಕರು.

ಪ್ರತಿಭಟನೆ ವೇಳೆ ನಿಂಗಪ್ಪ ಮಾದರ ಮಾತನಾಡಿ ಅಂತರ್ ಜಾತಿ ಮದುವೆಯಾದ ಅಮಾಯಕ ಬಡ ದಲಿತ ಮಹಿಳೆ ಮತ್ತು ಅವಳ ಕುಟುಂಬದ ಮೇಲೆ ದೌರ್ಜನ್ಯ ಎಸಗಿ, ಹಲ್ಲೆ ಮಾಡಿದ್ದು ನಾಗರಿಕ ಸಮಾಜ ತಲೆ ತಗ್ಗಿಸುವಂತಾಗಿದೆ. ಕೂಡಲೇ ಇನ್ನುಳಿದ 4. ಜನ ಆರೋಪಿಗಳನ್ನು ಬಂಧಿಸಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು. ದೌರ್ಜನ್ಯಕ್ಕೆ ಒಳಗಾದ ದಲಿತ ಕುಟುಂಬಕ್ಕೆ ನ್ಯಾಯ ಒದಗಿಸಬೇಕೆಂದು ಆಗ್ರಹಿಸಿದರು.

ಬಳಿಕ ಮಾತನಾಡಿದ ರೋಣ ಠಾಣಾ ಸಿಪಿಐ ಎಸ್.ಎಸ್ ಬೀಳಗಿ ಮಾತನಾಡಿ ನಮ್ಮ ಇಲಾಖೆ ಸಿಬ್ಬಂದಿ 5. ದಿನಗಳ ಕಾಲ ಆರೋಪಿತರನ್ನು ಬಂಧಿಸಲು ಕಾರ್ಯಾಚರಣೆ ನಡೆಸುತ್ತಾಯಿದೆ 8. ಜನ ಆರೋಪಿ ಪೈಕಿ 4. ಜನ ಆರೋಪಿಗಳನ್ನ ಬಂಧಿಸಲಾಗಿದೆ ಇನ್ನೂಳಿದ ಆರೋಪಿಗಳನ್ನು ಬಂಧಿಸಲು ಮಂಗಳವಾರದ ವರೆಗೆ ಸಮಯ ಕಲ್ಪಿಸಿ ಕೊಡಿ ಎಂದು ಧರಣಿ ಸತ್ಯಾಗ್ರಹವನ್ನು ಇಲ್ಲಿಗೆ ನಿಲ್ಲಿಸಿ ಎಂದು ಹೇಳಿದರು.

ನಂತರ ಮಾತನಾಡಿದ ಮುಖಂಡರು ಅಂತರ್ ಜಾತಿ ಮದುವೆಯಾದ ಮಹಿಳೆ ಕುಟುಂಬದ ಮೇಲೆ ದೌರ್ಜನ್ಯ ಎಸಗಿ, ಹಲ್ಲೆ ಮಾಡಿದ ಆರೋಪಿಗಳನ್ನು ಮಂಗಳವಾರದ ಒಳಗಡೆ ಬಂಧಿಸಬೇಕು ಒಂದು ವೇಳೆ ಮಂಗಳವಾರದ ಒಳಗಡೆ ಬಂಧಿಸಿದೆ ಇದ್ದಲ್ಲಿ ಮುಂಬರುವ ದಿನದಲ್ಲಿ ಪೊಲೀಸ್ ಇಲಾಖೆ ವಿರುದ್ಧ ವಿವಿಧ ದಲಿತ ಪರ ಸಂಘಟನೆ ವತಿಯಿಂದ ತಾಲೂಕಿನಾದ್ಯಂತ ಉಗ್ರವಾದ ಹೋರಾಟವನ್ನು ಹಮ್ಮಿಕೊಳಲಾಗುವದು ಎಂದು ಎಚ್ಚರಿಕೆ ಕೊಡುವುದರ ಮೂಲಕ ಹಾಕ್ಕೋತ್ತಾಯ ಪತ್ರ ಸಲ್ಲಿಸಿದರು.


ಎಸ್ ಪ್ರಿಯ ವೀಕ್ಷಕ-ರೇ ದಲಿತ ಕುಟುಂಬದ ಮೇಲೆ ಮಾರಣಾಂತಿಕವಾಗಿ ಹಲ್ಲೆ ಮಾಡಿದ ಇನ್ನೂಳಿದ ಆರೋಪಿಗಳನ್ನು ಬಂಧಿಸಲು ಮಂಗಳವಾರದ ವರೆಗೆ ಸಮಯ ತೆಗೆದು ಕೊಂಡ ರೋಣ ಪೊಲೀಸ್ ಇಲಾಖೆ ಅಧಿಕಾರಿಗಳು ಇನ್ನೂಳಿದ ಆರೋಪಿಗಳನ್ನು ಮಂಗಳವಾರದ ಒಳಗೆ ಬಂಧಿಸಿ ರೋಣ ದಲಿತ ಮುಖಂಡರಿಗೆ ಕೊಟ್ಟ ಮಾತಿನಂತೆ ನಡೆದು ಕೊಳ್ಳುವವರೋ ಇಲ್ಲವೋ ಎಂದು ಕಾಯ್ದು ನೋಡೋಣ.

ಇದೇ ಸಂದರ್ಭದಲ್ಲಿ ಪ್ರಕಾಶ ಹೊಸಳ್ಳಿ.ಸುರೇಶ ನಡುವಿನಮನಿ. ಸೋಮು ನಾಗರಾಜ್. ಯಲ್ಲಪ್ಪ ಹಿರೇಮನಿ. ಶರಣಪ್ಪ ದೊಡ್ಡಮನಿ ವಾಸುದೇವ ಹರುಣಸಿ. ಪ್ರಕಾಶ ಮಾದರ. ದುರುಗಪ್ಪ ಮಾದರ. ಚಂದ್ರು ಹಂಚಿನಾಳ. ಮಾದೇವ ತಗ್ಗಿನಮನಿ.ಅಭಿಷೇಕ ಕೊಪ್ಪದ. ಹುಚ್ಚಿರಪ್ಪ ಬಾವಿಮಣಿ.ಸುರೇಶ ಹಲಗಿ.ಮಂಜುಹಲಗಿ.ಸೇರಿದಂತೆ ಇನ್ನೂ ಅನೇಕ ಮುಖಂಡರು ಉಪಸ್ಥಿತರಿದ್ದರು.

**ವರದಿ. ಅಂದಪ್ಪ ಮಾದರ**

## ಕಾವ್ಯಶ್ರೀ ಚಾರಿಟ್ರಬಲ್ ಟ್ರಸ್ಟ್ ನ ರಾಜ್ಯಾಧ್ಯಕ್ಷ ಡಾ. ಶಿವಣ್ಣ. ಜಿ ಸೇರಿ 63 ಸಾಧಕರಿಗೆ ಆರ್ಯಭಟ ಪ್ರಶಸ್ತಿ

**ಸಿಹಿ ಕಹಿ ಸುದ್ದಿ,**



**ಬೆಂಗಳೂರು :** ಆರ್ಯಭಟ ಸಾಂಸ್ಕೃತಿಕ ಸಂಸ್ಥೆಯ 50 ನೇ. ವರ್ಷದ ಸುವರ್ಣ ಮಹೋತ್ಸವ ಸಂಭ್ರಮದ ಹಿನ್ನೆಲೆಯಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಸಾಧಕರು ಗಣ್ಯರನ್ನು ಸನ್ಮಾನಿಸುವ ಕಾರ್ಯಕ್ರಮ ಇದೇ ಮೇ 22. ರಂದು ಬೆಂಗಳೂರಿನ ರವೀಂದ್ರ ಕಲಾ ಕ್ಷೇತ್ರದಲ್ಲಿ ಹಮ್ಮಿಕೊಳ್ಳಲಾಗಿದೆ.

ಕಾವ್ಯಶ್ರೀ ಚಾರಿಟ್ರಬಲ್ ನ ಅಧ್ಯಕ್ಷ ಡಾಕ್ಟರ್, ಜಿ.ಶಿವಣ್ಣ ಸೇರಿದಂತೆ ವಿದೇಶಿ ಭಾರತೀಯರು ಹಾಗೂ ಕರ್ನಾಟಕದ 63 ಸಾಧಕರಿಗೆ ಆರ್ಯಭಟ ಅಂತರಾಷ್ಟ್ರೀಯ ಪ್ರಶಸ್ತಿ ನೀಡಿ ಗೌರವಿಸಲಾಗುತ್ತದೆ.

ಡಾ. ಶಿವಣ್ಣ.ಜಿ ರವರು ಕಾವ್ಯಶ್ರೀ ಚಾರಿಟ್ರಬಲ್ ಟ್ರಸ್ಟ್ ರಾಜ್ಯಾಧ್ಯಕ್ಷರಾಗಿ ಕರ್ನಾಟಕದ ಅನೇಕ ನಾಡು ನುಡಿ ಸಾಹಿತ್ಯ ಕಲೆ ಸಂಗೀತ ಕವಿ ಗೋಷ್ಠಿ ಸೇರಿ ನಾಡಿನಾದ್ಯಂತ ಅನೇಕ ಸಾಧಕರನ್ನು ಗುರುತಿಸಿ ತಮ್ಮ ಸಂಸ್ಥೆಯಿಂದ ವಿವಿಧ ಕ್ಷೇತ್ರದ ಸಾಧಕರಿಗೆ ಗೌರವ ಸನ್ಮಾನಿಸುವುದರ ಜೊತೆಗೆ ಅನೇಕ ಕನ್ನಡಪರ ಕಾರ್ಯಕ್ರಮಗಳನ್ನು ನಡೆಸಿ ಕೊಂಡು ಬಂದಿರುವುದನ್ನು ಗುರುತಿಸಿ ಆರ್ಯಭಟ ಅಂತರಾಷ್ಟ್ರೀಯ ಪ್ರಶಸ್ತಿ ನೀಡಿ ಗೌರವಿಸಲಾಗುತ್ತದೆ ಎಂದು ಆರ್ಯಭಟ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾದ ಡಾ, ಎಚ್. ಎಲ್.ಎನ್ ರಾವ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ಕಾರ್ಯಕ್ರಮದಲ್ಲಿ ನ್ಯಾಯಮೂರ್ತಿ ಡಾಕ್ಟರ್, ಅಶೋಕ್.ಬಿ ಹಿಂಚಿಗೇರಿ, ವಿಧಾನ ಪರಿಷತ್ ಸಭಾಪತಿ ಬಸವರಾಜ್ ಹೊರಟ್ಟಿ, ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷರಾದ ನಾಡೋಜಾ ಡಾ, ಮಹೇಶ್ ಜೋಶಿ, ಸೇರಿದಂತೆ 63 ಸಾಧಕರಿಗೆ ಬೆಂಗಳೂರಿನ ರವೀಂದ್ರ ಕಲಾ ಕ್ಷೇತ್ರದಲ್ಲಿ ಹಾಗೂ ನಾಡಿನ ಗಣ್ಯರನ್ನು ಗೌರವಿಸ ಲಾಗುವುದು ಎಂದು ತಿಳಿಸಿದರು. ಇದೇ ಸಂದರ್ಭದಲ್ಲಿ ಕಾವ್ಯಶ್ರೀ ಚಾರಿಟ್ರಬಲ್ ಟ್ರಸ್ಟ್ ಕರ್ನಾಟಕ ಅಧ್ಯಕ್ಷರು, ಸಂಚಾಲಕರು, ಪದಾಧಿಕಾರಿಗಳು, ಮತ್ತು ಚೇತನ ಫೌಂಡೇಶನ್ ಧಾರವಾಡ ಸಂಸ್ಥಾಪಕ ಅಧ್ಯಕ್ಷರು, ಸಂಚಾಲಕರು ಸರ್ವ ಸದಸ್ಯರು, ಅಧ್ಯಕ್ಷರು ಕರ್ನಾಟಕ ಸೋಶಿಯಲ್ ಕ್ಲಬ್, ಅಧ್ಯಕ್ಷರು ವಿಶ್ವಾಸ್ ಫೌಂಡೇಶನ್ ಹುಬ್ಬಳ್ಳಿ ಮತ್ತು ಸರ್ವ ಸದಸ್ಯರು ಸಾಹಿತ್ಯ ಅಭಿಮಾನಿಗಳು ಕನ್ನಡ ಮನಸ್ಸುಗಳು ಹರ್ಷ ವ್ಯಕ್ತಪಡಿಸಿದ್ದಾರೆ.

**ಹೋಬಳಿ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಕೆ.ಎಸ್ ವೀರೇಶ್. ಕೆ.ಹೊಸಹಳ್ಳಿ**

## ಸೂಲಗಿತ್ತಿ ತಳುಕಿನ ತಿಮ್ಮಕ್ಕರ ನಿಸ್ವಾರ್ಥ ಸೇವೆಯನ್ನು ಶ್ರೀಶಾರದಾಶ್ರಮದ ಸದ್ಭಕ್ತರು ಗುರುತಿಸಿ ಸನ್ಮಾನಿಸುತ್ತಿರುವುದು ಶ್ಲಾಘನೀಯ: ರೈತ ಮುಖಂಡ ಕೆ.ಪಿ. ಭೂತಯ್ಯ

**ಸಿಹಿ ಕಹಿ ಸುದ್ದಿ,**

**ಕಾಲುವೆಹಳ್ಳಿ :** ಸೂಲಗಿತ್ತಿ ತಳುಕಿನ ತಿಮ್ಮಕ್ಕ ಮತ್ತು ಗೋಪಾಲಕಿ ಪಾರ್ವತಮ್ಮನವರ ನಿಸ್ವಾರ್ಥ ಸೇವೆಯನ್ನು ಶ್ರೀಶಾರದಾಶ್ರಮದ ಸದ್ಭಕ್ತರು ಗುರುತಿಸಿ ಸನ್ಮಾನಿಸುತ್ತಿರುವುದು ಶ್ಲಾಘನೀಯ ಸೇವೆ ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ರಾಜ್ಯ ಉಪಾಧ್ಯಕ್ಷ ಕೆ.ಪಿ ಭೂತಯ್ಯ ತಿಳಿಸಿದರು. ತಾಲೂಕಿನ ಕಾಲುವೆಹಳ್ಳಿಯ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸಾವಿರಾರು ಗರ್ಭಿಣಿ ಸ್ತ್ರೀಯರಿಗೆ ಉಚಿತವಾಗಿ ಹೆರಿಗೆ ಮಾಡಿಸಿರುವ ಸೂಲಗಿತ್ತಿ ತಳುಕಿನ ತಿಮ್ಮಕ್ಕ ಮತ್ತು ನೂರಾರು ದೇಸಿ ಗೋವುಗಳನ್ನು ನಿಸ್ವಾರ್ಥವಾಗಿ ಪಾಲನೆ ಪೋಷಣೆ ಮಾಡುತ್ತಿರುವ ಪಾರ್ವತಮ್ಮನವರಿಗೆ ಶ್ರೀಶಾರದಾಶ್ರಮದ ಸದ್ಭಕ್ತರಾದ ಶ್ರೀಮತಿ ಶಿಲ್ಪಾ ರಮೇಶ್ ಮತ್ತು ಆಶಾ ಅನುಪ್ ಅವರ ಉದಾರ ಆರ್ಥಿಕ ನೆರವಿನಿಂದ ಆಹಾರ ಸಾಮಗ್ರಿಗಳನ್ನು, ಗೃಹ ಬಳಕೆಯ ವಸ್ತುಗಳನ್ನು ಸನ್ಮಾನ ಹಾಗೂ ಗೌರವಧನದ ವಿತರಣಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ಜಿಲ್ಲಾ ಪ್ರಯೋಗಶಾಲಾತಾಂತ್ರಿಕಅಧಿಕಾರಿಜೆ.ಹೆಚ್ ರಾಘವೇಂದ್ರ ಮಾತನಾಡಿ ಕಾಲುವೆಹಳ್ಳಿಯ ಸುತ್ತಮುತ್ತಲಿನ ಗ್ರಾಮಗಳಲ್ಲಿ ಐವತ್ತು ವರ್ಷಗಳ ಕಾಲ ನಿಸ್ವಾರ್ಥವಾಗಿ ಸಾವಿರಾರು ಗರ್ಭಿಣಿ ಸ್ತ್ರೀಯರಿಗೆ ಉಚಿತವಾಗಿ ಹೆರಿಗೆ ಮಾಡಿಸಿರುವ ಸೂಲಗಿತ್ತಿ ತಳುಕಿನ ತಿಮ್ಮಕ್ಕ ಅವರು ಗೃಹ ಲಕ್ಷ್ಮೀ ಮತ್ತು ವೃದ್ಧಾಪ್ಯ ವೇತನದಿಂದ ಬರುವ ಹಣದಿಂದ ಜೀವನ ಸಾಗಿಸುತ್ತಿದ್ದು ಅವರಿಗೆ ಸರಿಯಾದ ಸೂರಿನ



ವ್ಯವಸ್ಥೆಯಿಲ್ಲ ಅವರಿಗೆ ತುರ್ತಾಗಿ ಮನೆ ನಿರ್ಮಿಸುವ ಅಗತ್ಯವಿದ್ದು ಸಂಬಂಧಪಟ್ಟ ಜನ ಪ್ರತಿನಿಧಿಗಳು ಹಾಗೂ ಸ್ಥಳೀಯ ಗ್ರಾಮ ಪಂಚಾಯಿತಿಯ ಆಡಳಿತ ಗಮನ ಹರಿಸಿ ಮನೆ ನಿರ್ಮಿಸಿ ಕೊಡಬೇಕು ಎಂದು ಮನವಿ ಮಾಡಿದರು. ಗ್ರಾಮದ ಹಿರಿಯ ಮುಖಂಡ ನೀಲಕಂಠ ಶೆಟ್ಟಿ ಅವರು ಗೋಪಾಲಕಿ ಪಾರ್ವತಮ್ಮನವರ ಗೋ ಸೇವೆಯನ್ನು ಕೊಂಡಾಡಿ ಆಕೆಯ ಸೇವೆಯನ್ನು ಶ್ರೀಶಾರದಾಶ್ರಮದ ಸದ್ಭಕ್ತರು ಗುರುತಿಸಿ ಗೌರವಿಸುತ್ತಿರುವುದು ನಮ್ಮ ಊರಿಗೆ ಹೆಮ್ಮೆಯ ವಿಷಯ ಎಂದರು. ಈ ಸಂದರ್ಭದಲ್ಲಿ ಶ್ರೀಶಾರದಾಶ್ರಮದ ಸದ್ಭಕ್ತರು ಸೂಲಗಿತ್ತಿ ತಳುಕಿನ ತಿಮ್ಮಕ್ಕ, ಗೋಪಾಲಕಿ ಪಾರ್ವತಮ್ಮ ಹಾಗೂ ತಿಮ್ಮಕ್ಕ ಅವರನ್ನು ನೋಡಿ ಕೊಳ್ಳುತ್ತಿರುವ ಪಾಲಕ್ಕರನ್ನು ಸನ್ಮಾಸಿ ಗೌರವಧನ ಮತ್ತು ಆಹಾರ ಧಾನ್ಯಗಳನ್ನು ವಿತರಿಸಲಾಯಿತು. ಇದೇ ಸಂದರ್ಭದಲ್ಲಿ ಗೋಪಾಲಕಿ ಪಾರ್ವತಮ್ಮನವರ ಗೋವುಗಳಿಗೆ ಗೋ ಪೂಜೆ, ಇಂಡಿ ಹಾಗೂ ಬಾಳೆ ಹಣ್ಣು ವಿತರಿಸುವ ಮೂಲಕ ಗೋ ಸೇವೆ ಮಾಡಿದರು. ಸಂಘಟಕ ಸಮಾಜ ಸೇವಕ ಯತೀಶ್.ಎಂ ಸಿದ್ದಾಪುರ ಕಾರ್ಯಕ್ರಮದ ಬಗ್ಗೆ ಮಾತನಾಡಿದರು. ಈ ಕಾರ್ಯಕ್ರಮದಲ್ಲಿ ಸದ್ಭಕ್ತರಾದ ಶಿಲ್ಪಾ ರಮೇಶ್, ಆಶಾ ಅನುಪ್, ಯತೀಶ್. ಎಂ ಸಿದ್ದಾಪುರ, ಶುಭ ಸೋಮಶೇಖರ್, ಮೋಹಿನಿ ಸತ್ಯನಾರಾಯಣ, ರುಕ್ಮಿಣಿ, ರಂಗಸ್ವಾಮಿ, ಡಿ.ಆರ್ ತಿಮ್ಮಣ್ಣ, ಲಿಂಗದಹಳ್ಳಿ ಪಾಲಣ್ಣ, ಕೆ.ಜಿ. ರಾಮಣ್ಣ, ಜಿ.ಕಾಂತಣ್ಣ, ಬ್ರೇಕಿ ಲೋಕೇಶ್, ಕೆ.ಓ ಪಾಲಣ್ಣ, ಲೋಕೇಶ್ ಪೂಜಾರಿ, ರಾಜಣ್ಣ, ಉಪಸ್ಥಿತರಿದ್ದರು.

**ವರದಿ-ಯತೀಶ್ ಎಂ ಸಿದ್ದಾಪುರ, ಚಳ್ಳಕೆರೆ**

## ತಾಲೂಕ ವೈದ್ಯಾಧಿಕಾರಿ ಡಾ. ಶರಣಬಸವರ ಅಮಾನತ್ತಿಗೆ ಜಯ ಕರ್ನಾಟಕ ರಕ್ಷಣಾ ಸೇನೆಯಿಂದ ಆಗ್ರಹ



**ಸಿಹಿ ಕಹಿ ಸುದ್ದಿ,**

**ಮಾನ್ವಿ :** ಮಾನ್ವಿ ಹಾಗೂ ಸಿರವಾರ ತಾಲೂಕಲ್ಲಿ ನಕಲಿ ವೈದ್ಯರ ಹಾವಳಿ ಮಿತಿ ಮೀರಿದ್ದು. ಇದನ್ನು ಕ್ರಮ ಜರುಗಿಸದೆ ಮೌನ ತಂತ್ರ ಅನುಸರಿಸಿದ ತಾಲೂಕ ವೈದ್ಯಾಧಿಕಾರಿ ಡಾಕ್ಟರ್, ಶರಣಬಸವರನ್ನು ಅಮಾನತು ಮಾಡುವಂತೆ ಜಯ ಕರ್ನಾಟಕ ರಕ್ಷಣಾ ಸೇನೆಯ ಪದಾಧಿಕಾರಿಗಳು ಬಸವ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು.

ರಾಯಚೂರು ಜಿಲ್ಲೆಯ ಮಾನ್ವಿ ಮತ್ತು ಸಿರವಾರ ತಾಲೂಕಲ್ಲಿ ನಕಲಿ ವೈದ್ಯರ ಹಾವಳಿ ಯಿಂದಾಗಿ ಬಡ ಜನರ ಮೇಲೆ ದುಷ್ಪರಿಣಾಮ ಬೀರಿದರು ಸಹ ಅಮಾಯಕರು ಹೆಚ್ಚಿನ ಡೋಸ್ ಮೂಲಕ ಸತ್ತರು ಸಹ ಇಲ್ಲಿ ಯಾರು ಹೇಳೋರು ಕೇಳೋರು ಯಾರು ಇಲ್ಲವಾಗಿದೆ ಎಂದು ಪ್ರತಿಭಟನಾಕಾರರು ಕಿಡಿ-ಕಾರಿದರು.

ನಕಲಿ ವೈದ್ಯರ ಹಾವಳಿ ಇದೆ ಎಂದು ಹಲವಾರು ದೂರು ಸಲ್ಲಿಸಿದರು ಸಹ ಮಾನ್ವಿ ತಾಲೂಕ ವೈದ್ಯಾಧಿಕಾರಿ ಡಾಕ್ಟರ್, ಶರಣಬಸವ ಅವರು ನಕಲಿ ವೈದ್ಯರ ಜೊತೆ ಶಾಮೀಲಾಗಿದ್ದ ರಿಂದ ಕ್ರಮ ಜರುಗಿಸದೆ ನಿಷ್ಕಾಳಜಿ ವಹಿಸಿದ ಹಿನ್ನೆಲೆಯಲ್ಲಿ ಹೋರಾಟ ಹಮ್ಮಿಕೊಳ್ಳಲಾಗಿದೆ. ಕೂಡಲೆ ವೈದ್ಯಾಧಿಕಾರಿ ಡಾಕ್ಟರ್ ಶರಣಬಸವ ಅವರನ್ನು ಅಮಾನತು ಮಾಡಬೇಕು ಎಂದು ಒತ್ತಾಯಿಸಿದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಹುಸೇನ್.ಭಾಷಾ.ನಕ್ಕುಂದಿ.ಮಾನ್ವಿ**

## ತಾಯಿಯ ಸ್ಥಾನಕ್ಕೆ ಮಿಗಿಲಾದ ಸ್ಥಾನ ಮತ್ತೊಂದಿಲ್ಲ: ನಾರನಗೌಡ ಉತ್ತಂಗಿ

**ಮಹಾಲಿಂಗಪುರ :** ಜಗತ್ತಿನಲ್ಲಿ ಕೆಟ್ಟ ಮಕ್ಕಳಿರಬಹುದೇ ಹೊರತು ಕೆಟ್ಟ ತಾಯಿ ಎಂದಿಗೂ ಇರಲಾರಳು. ಮಕ್ಕಳ ಏಳ್ಗೆ, ಅಭಿವೃದ್ಧಿಗಾಗಿ ಸರ್ವಸ್ವವನ್ನೇ ತ್ಯಾಗ ಮಾಡುವ ತಾಯಿಯ ಸ್ಥಾನಕ್ಕೆ ಮಿಗಿಲಾದ ಸ್ಥಾನ ಮತ್ತೊಂದಿಲ್ಲ. ಅಂಥ ತಾಯಿಯನ್ನು ಪೂಜಿಸಿ ಗೌರವಿಸುವ ಕಾರ್ಯ ಶ್ರೇಷ್ಠ ಎಂದು ಶಿಕ್ಷಕ ನಾರನಗೌಡ ಉತ್ತಂಗಿ ಹೇಳಿದರು.

ತಾಯಂದಿರ ದಿನದ ಪ್ರಯುಕ್ತ ಪಟ್ಟಣದ ಕುಬಸದ ಗಲ್ಲಿಯಲ್ಲಿ ವಿದ್ಯಾಶ್ರೀ ಸ್ವಸಹಾಯ ಸಂಘದ ವತಿಯಿಂದ ಹಮ್ಮಿಕೊಂಡ ಮಾತೃ ವಂದನಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು,

ನಿತ್ಯವೂ ಅಮ್ಮನ ಆಶೀರ್ವಾದ ಪಡೆದು ಹೆಜ್ಜೆ ಇಟ್ಟರೆ ಯಾವುದೇ ಕೆಲಸದಲ್ಲಿ ಸೋಲು



ಇರುವುದಿಲ್ಲ ಎಂದರು.

ಬಸವಾನಂದ ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ಎಸ್. ಎಂ. ಮುಗಳಖೋಡ ಮಾತನಾಡಿ ಎಲ್ಲಿ ಸ್ತ್ರೀಯರನ್ನು ಗೌರವಿಸಲಾಗುತ್ತದೆಯೋ ಅಲ್ಲಿ ದೇವತೆಗಳು ನೆಲೆಸುತ್ತಾರೆ ಎಂಬ ಮಾತಿನಂತೆ ಇಂದು ಕುಬಸದ ಗಲ್ಲಿಯಲ್ಲಿ ತಾಯಂದಿರನ್ನು ಗೌರವಿಸಿದ್ದು ಮಾದರಿ ಕಾರ್ಯ ಎಂದರು.

ದಯಾನಂದಾಚಾರ್ಯ ಅವರ ಮಾರ್ಗದರ್ಶನದಲ್ಲಿ ಸ್ಥಳೀಯ ಬಡಾವಣೆಯ ನೂರಾರು ಮಕ್ಕಳು ತಮ್ಮ ತಮ್ಮ ತಾಯಂದಿರ ಪಾದಪೂಜೆ ಮಾಡಿ ಗೌರವ ಸಲ್ಲಿಸಿ ಆಶೀರ್ವಾದ ಪಡೆದರು. ತಮ್ಮ ಮಕ್ಕಳ ಭಕ್ತಿ ಭಾವ ಕಂಡ ತಾಯಂದಿರು ಮಕ್ಕಳ ಹಣೆಗೆ ಸಿಂಧೂರವಿಟ್ಟು ಹೃದಯ ತುಂಬಿ ಹರಸಿ, ಭಾರತೀಯ ಸೇನೆಯ ಆಪರೇಷನ್ ಸಿಂಧೂರಕ್ಕೆ ಗೌರವ ಸಲ್ಲಿಸಿದರು.

ಗಿರಿಮಲ್ಲಪ್ಪ ಯರಗಟ್ಟಿ, ಚಂದ್ರು ಯರಗಟ್ಟಿ, ಮಲಕಾಜಪ್ಪ ಅಂಬಿ, ಅನ್ನಪೂರ್ಣ ಯರಗಟ್ಟಿ, ಸುಬ್ಬವ್ವ ಗಲಗಲಿ, ದೀಪಾ ಹುಣಶ್ಯಾಳ, ಲಕ್ಷ್ಮೀ ಜಮಖಂಡಿ, ಸಿದ್ದಪ್ಪ ಹುಣಶ್ಯಾಳ, ಮಹಾಲಿಂಗ ಹನಗಂಡಿ, ಶೃತಿ ಯರಗಟ್ಟಿ, ರಾಜೇಶ್ವರಿ ಹನಗಂಡಿ ಸೇರಿದಂತೆ ನೂರಾರು ಮಹಿಳೆಯರು ಮಕ್ಕಳು ಭಾಗವಹಿಸಿದ್ದರು. ಬಸವಾನಂದ ಶಾಲೆಯ ಶಿಕ್ಷಕ ಸಿ. ವಿ. ಹುಣಶ್ಯಾಳ ನಿರೂಪಿಸಿ-ವಂದಿಸಿದರು.

## ತಾಳಿ ಕಟ್ಟಿ ಬದುಕಿಗೆ ವಿರಾಮ ಹೇಳಿದ ವರ: ಮುಗಿಲು ಮುಟ್ಟಿದ ಕುಟುಂಬಸ್ಥರ ಆಕ್ರಂದನ

**ಜಮಖಂಡಿ :** ವಿಧಿಯಾಟ ಬಲ್ಲವರಿಲ್ಲ ಎಂಬ ಮಾತಿದೆ.. ಈ ವಿಧಿಯಾಟವು ಯಾರಿಗಾದರೂ ಕ್ಷಣಮಾತ್ರ ಸಿಡಿಲು ಬಡಿದಂತೆ ಮಾಡುವುದು ದಿಟ. ಇಲ್ಲೂ ಆಗಿದ್ದು ಅದೇ.

ಘಟನೆಯಿಂದ ಮದುವೆಯ ಸಂಭ್ರಮದ ಮನೆಯಲ್ಲೀಗ ಸೂತಕದಛಾಯೆಆವರಿಸಿದೆ.ಮೃತ ವರ ಪ್ರವೀಣ ಕುರಣಿ ಮೂಲತಃ ಕುಂಬಾರಹಳ್ಳಿ ಗ್ರಾಮದವರು ಎಂದು ತಿಳಿದುಬಂದಿದೆ. ತಾಳಿ ಕಟ್ಟಿ ಆರಕ್ಷತೆ ಬಳಿಕ ಕೆಲವೇ ಗಂಟೆಗಳಲ್ಲಿ ನವಜೋಡಿಯು



ವೇದಿಕೆ ಆಗಮಿಸಿದಾಕ್ಷಣ ವರನಿಗೆ ಹಾರ್ಟ್ ಅಟ್ಯಾಕ್ ಆಗಿದೆ.

ಪ್ರವೀಣ ರಾಜ್ಯ ಸೈಕ್ಲಿಂಗ್ ಸಂಘದ ಕಾರ್ಯದರ್ಶಿ ಶ್ರೀಶೈಲ ಅವರ ಪುತ್ರನೆಂದೂ ವರದಿಯಾಗಿದೆ. ಸದ್ಯ ಈ ದಾರುಣ ಘಟನೆಯಿಂದ ಎರಡೂ ಕುಟುಂಬದವರ ಆಕ್ರಂದನ ಮುಗಿಲು ಮುಟ್ಟಿದೆ ತಾಳಿ ಕಟ್ಟಿದ ಕೆಲವೇ ಗಂಟೆಗಳಲ್ಲಿ ವರನಿಗೆ ಹೃದಯಾಘಾತವಾಗಿ ಸ್ಥಳದಲ್ಲೇ ಕುಸಿದುಬಿದ್ದು ಸಾವನ್ನಪ್ಪಿರುವ ಹೃದಯವಿದ್ರಾವಕಘಟನೆಜಿಲ್ಲೆಯ ಜಮಖಂಡಿಯ ನಂದಿಕೇಶ್ವರ ಕಲ್ಯಾಣಮಂಟಪದಲ್ಲಿ ಇಂದು ನಡೆದಿದೆ.

# ಭಾರತದ ಹಿತ, ರಕ್ಷಣೆ ನಮ್ಮೆಲ್ಲರ ಆದ್ಯ ಕರ್ತವ್ಯ: ಯು.ಟಿ. ಖಾದರ್



**ವಿಜಯಪುರ** : ಭಾರತದ ಹಿತ, ರಕ್ಷಣೆ ಮಾಡುವುದು ನಮ್ಮೆಲ್ಲರ ಆದ್ಯ ಕರ್ತವ್ಯ. ಕೇಂದ್ರ ಸರ್ಕಾರ ಏನು ತೀರ್ಮಾನ ತೆಗೆದುಕೊಳ್ಳುತ್ತದೆ, ಸರ್ವ ಪಕ್ಷದ ಸಭೆಯಲ್ಲಿ ಏನು ತೀರ್ಮಾನ ತೆಗೆದುಕೊಳ್ಳಲಾಗುತ್ತದೆ. ಅದಕ್ಕೆ ಬದ್ಧರಾಗಬೇಕು ಎಂದು ಸಭಾಧ್ಯಕ್ಷ ಯು.ಟಿ. ಖಾದರ್ ಹೇಳಿದರು.

ಪಾಕಿಸ್ತಾನ ಕದನ ವಿರಾಮ ಉಲ್ಲಂಘಿಸಿದ ವಿಚಾರಕ್ಕೆ ನಗರದಲ್ಲಿ ಪ್ರತಿಕ್ರಿಯಿಸಿ, ನಮ್ಮ ಸೈನಿಕರಿಗೆ ನೈತಿಕ ಧೈರ್ಯ, ಸೈನಿಕರಿಗೆ ರಕ್ಷಣೆಯ ಪ್ರಾರ್ಥನೆ ಮಾಡುವ ಕೆಲಸ ದೇಶದ ಪ್ರತಿ ನಾಗರಿಕರು ಮಾಡುತ್ತಿದ್ದಾರೆ. ನಮ್ಮ ದೇಶ ಒಗ್ಗಟ್ಟಿನ ಸಂದೇಶ ಕೊಡುತ್ತಿದೆ ಎಂದರು.

ಯಾರು ನಮ್ಮ ದೇಶಕ್ಕೆ ಬಂದು ಭಯೋತ್ಪಾದನೆ ಮಾಡುತ್ತ, ತೊಂದರೆ ನೀಡಿ, ಧರ್ಮಾಧಾರಿತ ಸಮಸ್ಯೆ ಉಂಟು ಮಾಡಿ,

ಜನರ ಮಧ್ಯೆ ಗಲಾಟೆ ಆಗಬೇಕೆಂಬ ಉದ್ದೇಶದಿಂದಲೇ ಭಯೋತ್ಪಾದನೆ ಮಾಡುವಂತಹದ್ದು.

ಭಯೋತ್ಪಾದಕರ ಉದ್ದೇಶ ಈಡೇರಿಸಲು ನಾವ್ಯಾರೂ ಕೂಡ ನಮ್ಮ ದೇಶದಲ್ಲಿ ಅವಕಾಶ ಮಾಡಬಾರದು.

ನಾವಾಡುವ ಪ್ರತಿ ಮಾತು,

ಪ್ರತಿ ಕೆಲಸ ದೇಶ ಕಟ್ಟುವ ಕೆಲಸ ಆಗಬೇಕೇ ಹೊರತು

ದೇಶವನ್ನು ಬಿಗಡಾಯಿಸುವ ಕೆಲಸ ಯಾರಿಂದಲೂ ಆಗಬಾರದು ಎಂದರು.

# ಕುಸ್ತಿಗೆ ಪ್ರಾಚೀನ ಕಾಲದ ಇತಿಹಾಸವಿದೆ: ಮಾಜಿ ಸಚಿವ ಅಪ್ಪಾಸಾಹೇಬ



**ವಿಜಯಪುರ:** ಕುಸ್ತಿ ಪಂದ್ಯ ಪ್ರಾಚೀನ ಕಾಲದ ಇತಿಹಾಸ ಹೊಂದಿದೆ. ಕುಸ್ತಿ ಪಂದ್ಯಗಳನ್ನು ಜಾತ್ರೆ, ಉತ್ಸವಗಳಲ್ಲಿ ವೈಭವದಿಂದ ಆಯೋಜಿಸಲಾಗುತ್ತದೆ. ಕುಸ್ತಿ ಇಲ್ಲದಿದ್ದರೆ ಜಾತ್ರೆ ಪರಿಪೂರ್ಣವಾಗುವುದಿಲ್ಲ ಎಂದು ಮಾಜಿ ಸಚಿವ ಆಪ್ಪಾಸಾಹೇಬ ಪಟ್ಟಣಶೆಟ್ಟಿ ಹೇಳಿದರು.

ಬುಧವಾರ ಸಂಜೆ ಹಿಟ್ಟಿನಹಳ್ಳಿ ಗ್ರಾಮದ ದ್ಯಾಮಗಂಗಾ ಹಾಗು ಮಾರುತೇಶ್ವರ ಜಾತ್ರೆಯ ನಿಮಿತ್ತ ಏರ್ಪಡಿಸಿದ ಕುಸ್ತಿ ಪಂದ್ಯಾವಳಿನ್ನು ಉದ್ಘಾಟಿಸಿ ಮಾತನಾಡಿ, ಕುಸ್ತಿ ಪಟುಗಳು ನಿರಂತರ ತರಬೇತಿ ಪಡೆಯುತ್ತಿಲ್ಲ. ಗ್ರಾಮೀಣ ಪ್ರದೇಶದ ಜನರು ಕುಸ್ತಿ ಪಂದ್ಯಗಳ ಬಗ್ಗೆ ನಿರಾಸಕ್ತಿ ಹೊಂದುತ್ತಿರುವದು ಅತ್ಯಂತ ನೋವಿನ ವಿಚಾರ. ಗರಡಿ ಮನೆಗಳೆಲ್ಲವೂ ಮರೆಯಾಗುತ್ತಿವೆ ಎಂದರು.

ಮೈಸೂರು ದಸರಾದಲ್ಲಿ ದೇಶದ ವಿವಿಧ ಭಾಗಗಳಿಂದ ನುರಿತ ಹಾಗು ಶಕ್ತಿಶಾಲಿ ಕುಸ್ತಿ ಪಟುಗಳು ಭಾಗವಹಿಸುತ್ತಾ ಗ್ರಾಮೀಣ ಪ್ರದೇಶದ ಈ ಕಲೆ ಉಳಿಸುತ್ತಾ ಬಂದಿದ್ದಾರೆ. ಆದ್ಯಾಗಲೂ ಇಂದು ಕುಸ್ತಿ ಪಂದ್ಯಗಳಿಗೆ ಸಾರ್ವಜನಿಕರು ನಿರಾಸಕ್ತಿ ಹೊಂದಿದ್ದಾರೆಂದು ಮಾಜಿ ಸಚಿವ ಅಪ್ಪಾಸಾಹೇಬ ಪಟ್ಟಣಶೆಟ್ಟಿ ನುಡಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಹಾಸಿಂಪೀರ ವಾಲಿಕಾರ ಅಧ್ಯಕ್ಷತೆ ವಹಿಸಿ ಮಾತನಾಡಿ, ನಶಿಸಿ ಹೋಗುತ್ತಿರುವ ಕುಸ್ತಿ ಪಂದ್ಯ ಪ್ರೋತ್ಸಾಹಿಸಿ ಬೆಳೆಸಬೇಕಾಗಿದೆ. ಕುಸ್ತಿ ಜನಪ್ರಿಯ ದೇಶಿ ಕ್ರೀಡೆಯಾಗಿದೆ. ವಿಜಯಪುರ ಶ್ರೀ ಸಿದ್ದೇಶ್ವರ ಜಾತ್ರೆಯಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಕುಸ್ತಿ ಪಂದ್ಯ ಜರುಗುತ್ತವೆ. ಬೇರೆ ರಾಜ್ಯಗಳಿಂದ ಕುಸ್ತಿ ಪಟುಗಳು ಭಾಗವಹಿಸುತ್ತಾರೆ. ಯಾವುದೇ ಆಯುಧವಿಲ್ಲದೆ ಶಾರೀರಿಕ ಸದೃಡತೆ ಹಾಗೂ? ಯುಕ್ತಿ ಬಳಸಿ ಗೆಲವು ಸಾಧಿಸುತ್ತಾರೆ. ಕುಸ್ತಿ ಪಂದ್ಯ ಪರಂಪರೆಗಳು ಉಳಿಯಬೇಕು ಎಂದರು.

ಐವತ್ತು ಜೋಡಿ ಕುಸ್ತಿಪಟುಗಳು ಕುಸ್ತಿ ಪಂದ್ಯಾವಳಿತಲ್ಲಿಭಾಗವಹಿಸಿದ್ದರು.ಅಶೋಕ ಬಗಲಿ, ಈರಣ್ಣ ಪಟ್ಟಣಶೆಟ್ಟಿ, ಸಾಹೇಬಗೌಡ ಬಿರಾದಾರ, ಮುದಸ್ಸರ ವಾಲಿಕಾರ, ಮಹಾಂತೇಶ ಶಿರಬೂರ, ಭೀಮನಗೌಡ ಬಿರಾದಾರ, ಜಗನ್ನಾಥ ಶಿರಬೂರ, ಮಲ್ಲಪ್ಪ ಬಾವಿಕಟ್ಟಿ, ರೇವಣಸಿದ್ದೇಶ್ವರ ಗೊಣಸಗಿ. ರಾಮಗೊಂಡ ಬೀಳೂರ, ಜಗನ್ನಾಥ ಶಿರಬೂರ, ಪ್ರಕಾಶ ಚಿಕ್ಕಲ,. ಮಲ್ಲಿಕಾರ್ಜುನ ಕಂಬಾರ, ಮುದಕಪ್ಪ ಪಡನಾಡ, ಯಾಳವಾರ. ಹುಸೇನ ವಾಲಿಕಾರ, ಸುಭಾಷ ಯಂಭತ್ನಾಳ, ವಿಠ್ಠಲ ಸಾರವಾಡ, ರಾಮಗೊಂಡ ಪಡಕೋಟಿ, ಆಶೋಕ ಕಟ್ಟಿ, ಶರಣು ಸಾಲಿ, ಸಿದ್ದು ಗಾಯಕವಾಡ, ರಾಚು ಬೊಳೆನ್ನವರ ಮುಂತಾದವರು ಉಪಸ್ಥಿತರಿದ್ದರು.

# ಪಾಕಿಸ್ತಾನ ಸರ್ವನಾಶ ಮಾಡಬೇಕು: ಯತ್ನಾಳ

**ವಿಜಯಪುರ** : ಭಾರತದ ದಾಳಿಯಿಂದ ಪಾಪಿ ಪಾಕಿಸ್ತಾನ ಅಮೇರಿಕ, ವಿಶ್ವಸಂಸ್ಥೆ ಕಾಲು ಹಿಡಿದು ನಾಟಕ ಆಡುತ್ತಿದೆ. ಮಹಾತ್ಮ ಗಾಂಧಿ, ಮಾಜಿ ಪ್ರಧಾನಿ ಜವಹರಲಾಲ್ ನೆಹರು ಮಾಡಿದ ತಪ್ಪನ್ನು ಪ್ರಧಾನಿ ನರೇಂದ್ರ ಮೋದಿಯವರು ಮಾಡಬಾರದು. ಪಾಕಿಸ್ತಾನ ಸರ್ವನಾಶ ಮಾಡಬೇಕು ಎಂದು ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ನಗರದಲ್ಲಿ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಯತ್ನಾಳ ಅವರು, ನನಗೆ ಬಿಜೆಪಿಗೆ ಸೇರ್ಪಡೆ ಮಾಡಿಕೊಳ್ಳಿ ಎಂದು ಕರ್ನಾಟಕದ ಯಾರ ಬಳಿಯೂ ನಾನು ಹೋಗಿಲ್ಲ. ನಾನು ಈ ಹಿಂದೆ ಕೂಡ ವಿಜಯಪುರ ಲೋಕಸಭಾ ಚುನಾವಣೆಯಲ್ಲಿ ಲೋಕಸಭಾ ಸ್ಥಾನಕ್ಕಾಗಿ ಚುನಾವಣೆ ಮಾಡಿಲ್ಲ. ದೇಶದ ಸಲುವಾಗಿ, ಪ್ರಧಾನಿ ಮೋದಿ ಅವರ ಸಲುವಾಗಿ ಚುನಾವಣೆ ಮಾಡಿರುವೆ ಎಂದರು.



ವಿಜಯಪುರ ಮತಕ್ಷೇತ್ರದಲ್ಲಿ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಲೀಡ್ ಆಗಲು ಕಾಂಗ್ರೆಸ್ ಅಭ್ಯರ್ಥಿ ರಾಜು ಆಲಗೂರ ಕಾರಣ. ಆತ ಸ್ಥಳೀಯ ಎಂಬ ಕಾರಣಕ್ಕೆ ಹೆಚ್ಚಿನ ಜನ ಮತ ಹಾಕಿದ್ದಾರೆ. ಇಷ್ಟು ದಿನ ಬಿಟ್ಟು ಜಿಗಜಿಣಗಿ ಅವರು ಈಗ ಮಾತನಾಡುತ್ತಾರೆ. ನನಗೆ ಶಾಶ್ವತ ಹೊರಗೆ ಹಾಕಲಾಗಿದೆ ಎಂದು ಅವರು ತಿಳಿದುಕೊಂಡಿದ್ದಾರೆ. ಕೆಲವರಿಗೆ ಹುಚ್ಚು ಹಿಡಿದಿದೆ, ನನಗೆಂದೂ ವಾಪಸ್ ತಗೆದುಕೊಳ್ಳಲ್ಲ ಅಂದುಕೊಂಡಿದ್ದಾರೆ. ಮೇಲಿನವರು ನನಗೆ ನಿರಂತರ ಸಂಪರ್ಕದಲ್ಲಿ ಇದ್ದಾರೆ. ವಿಜಯೇಂದ್ರ ರಾಜ್ಯಾಧ್ಯಕ್ಷ ಸ್ಥಾನದಿಂದ ಇಳಿಸಿದ ಬಳಿಕ ತಗೆದುಕೊಳ್ಳುತ್ತೇನೆ ಎಂದು ಹೇಳಿದ್ದಾರೆ ಎಂದರು.

## ವಿದ್ಯಾಪೋಷಕ ಆರ್ಥಿಕ ಸಹಾಯಧನಕ್ಕೆ ಅರ್ಜಿ ಆಹ್ವಾನ

**ಬಾದಾಮಿ** : ಆರ್ಥಿಕ ಸಂಕಷ್ಟದಲ್ಲಿರುವ ಬಡ ಪ್ರತಿಭಾನ್ವಿತ ವಿದ್ಯಾರ್ಥಿ/ನಿಯರಿಗೆ ಕಳೆದ 20 ವರ್ಷಗಳಿಂದ ವಿದ್ಯಾ ಪೋಷಕ ಧಾರವಾಡ ಸಂಸ್ಥೆಯು ಆರ್ಥಿಕ ನೆರವನ್ನು ನೀಡುತ್ತಾ ಬಂದಿದ್ದು, 2025-26 ಸಾಲಿಗೆ ಆರ್ಥಿಕ ನೆರವನ್ನು ಮಂಜೂರು ಮಾಡಲು ಅರ್ಜಿ ಆಹ್ವಾನಿಸಲಾಗಿದೆ ಎಂದು ನಗರದ ನ್ಯಾಯವಾದಿ, ಸಮಾಜ ಸೇವಕ ಎಂ.ಎಸ್.ಹಿರೇಮಠ ತಿಳಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು ಪ್ರಥಮ ವರ್ಷದ ಪಿಯುಸಿ ವಾಣಿಜ್ಯ ವಿಭಾಗ ಮತ್ತು ಡಿಪ್ಲೋಮಾ ವಿಭಾಗಕ್ಕೆ ಮಾತ್ರ ಸೇರ ಬಯಸುವ ವಿದ್ಯಾರ್ಥಿ/ನಿಯರು ಮಾತ್ರ ಅರ್ಹರಿರುತ್ತಾರೆ. ಸನ್ 2024-25 ರ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇ. 80% ಅಧಿಕ ಅಂಕಗಳನ್ನು ಪಡೆದಿರಬೇಕು. ಕುಟುಂಬದ ವಾರ್ಷಿಕ ವರಮಾನ ರೂ. 1.20 ಲಕ್ಷಕ್ಕಿಂತ ಕಡಿಮೆ ಇರಬೇಕು. ಅರ್ಹ ವಿದ್ಯಾರ್ಥಿ/ನಿಯರು ಜೂನ್ 10 ರೊಳಗೆ ವೆಬ್ ಸೈಟ್ ವಿಳಾಸ www.vidyaposhak.ngo.in ಗೆ ಅರ್ಜಿಯನ್ನು ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗೆ ಎಂ.ಎಸ್.ಹಿರೇಮಠ, ಮೊ;9740332482 ಸಂಪರ್ಕಿಸಲು ಕೋರಿದ್ದಾರೆ.

# ಸರ್ಕಾರದಿಂದ ಅನುಮೋದನೆಗೊಂಡ ಯೋಜನೆಗಳ ವಿವರ ಪಟ್ಟಿ ಸಿದ್ಧಪಡಿಸಿ: ಸಚಿವ ಎಂ.ಬಿ. ಪಾಟೀಲ

**ವಿಜಯಪುರ** : ವಿಜಯಪುರದಲ್ಲಿ ನಡೆಯಲಿರುವ ಸಚಿವ ಸಂಪುಟ ಸಭೆಯ ಪೂರ್ವಸಿದ್ಧತೆಗಳ ಕುರಿತು ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ಅವರು ಬುಧವಾರ ಜಿಲ್ಲೆಯ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು.



ಸಭೆಯಲ್ಲಿ ವಿಜಯಪುರ ಭಾಗದ ಅತೀ ಅವಶ್ಯಕ ಯೋಜನೆಗಳ ಜೊತೆಗೆ ಸ್ಥಳೀಯ ಜನಪ್ರತಿನಿಧಿಗಳಿಂದ ಅವರವರ ಕ್ಷೇತ್ರಕ್ಕೆ ಅಗತ್ಯವಿರುವ ಯೋಜನೆಗಳ ಮಾಹಿತಿಯನ್ನು ಕೂಡಲೇ ಪಡೆದುಕೊಂಡು ಆಯಾ ಇಲಾಖೆಯ ಅನುಮೋದನೆಯನ್ನು ಪಡೆದುಕೊಳ್ಳುವುದು ತಕ್ಷಣದ ಆದ್ಯತೆಯಾಗಿದೆ. ಇದರಿಂದ ನಗರದಲ್ಲಿ ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಜಿಲ್ಲೆಗೆ ಅಗತ್ಯವಿರುವ ಯೋಜನೆಗಳನ್ನು ಅನುಮೋದಿಸಲು ಅನುಕೂಲವಾಗುತ್ತದೆ ಎಂದು ಸಚಿವರು ಸೂಚಿಸಿದ್ದಾರೆ.

ಜಿಲ್ಲೆಯ ಪ್ರಮುಖ ಬೇಡಿಕೆಗಳ ಕುರಿತು ಜಿಲ್ಲೆಯ ಜನಪ್ರತಿನಿಧಿಗಳ, ಇಲಾಖಾವಾರು ಮತ್ತು ಸರ್ಕಾರದಿಂದ ಅನುಮೋದನೆಗೊಂಡ ಯೋಜನೆಗಳ ವಿವರವಾದ ಪಟ್ಟಿಯನ್ನು ಸಿದ್ಧಪಡಿಸಿ, ಸರ್ಕಾರದ ಮುಖ್ಯಕಾರ್ಯದರ್ಶಿಗಳನ್ನು ಭೇಟಿ ಮಾಡಿ, ಚರ್ಚಿಸಿ ಎಂದು ಜಿಲ್ಲಾಧಿಕಾರಿಗಳಿಗೆ ಸಚಿವ ಎಂ.ಬಿ.ಪಾಟೀಲ ಹೇಳಿದರು.

ಉತ್ತರ ಕರ್ನಾಟಕದ ಬೆಳಗಾವಿಯ ಸುವರ್ಣಸೌಧದಲ್ಲಿ ಸಂಪುಟಸಭೆಗಳು ನಡೆಯುತ್ತವೆ. ಅಲ್ಲದೇ, ಕಲಬುರಗಿಯಲ್ಲಿ ವಿಶೇಷ ಸಚಿವ ಸಂಪುಟ ಸಭೆ ನಡೆಸಿ, ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿಗಾಗಿ ಹಲವಾರು ಕ್ರಮಗಳನ್ನು ಜರುಗಿಸಲಾಗಿದೆ. ಈ ಹಿಂದೆ ಮಲೆಮಹಾದೇಶ್ವರ ಬೆಟ್ಟದಲ್ಲಿ ಸಚಿವ ಸಂಪುಟ ಸಭೆ ನಡೆದಿದ್ದು, ಅದೇ ರೀತಿ ವಿಜಯಪುರದಲ್ಲಿ ಸಚಿವ ಸಂಪುಟ ನಡೆಸಿದರೆ, ಇಡೀ ಉತ್ತರ ಕರ್ನಾಟಕದ ಸಮಸ್ಯೆಗಳ ಕುರಿತು ಬೆಳಕು ಚೆಲ್ಲಲು ಮತ್ತು ಇಲ್ಲಿನ ಯೋಜನೆಗಳಿಗೆ ವಿಶೇಷ ಪ್ಯಾಕೇಜ್ ಘೋಷಣೆ ಮಾಡಲು ಅನುಕೂಲವಾಗಲಿದೆ ಎಂಬ ದೃಷ್ಟಿಯಿಂದ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿದ್ದೆ. ನನ್ನ ಮನವಿಗೆ ಸ್ಪಂದಿಸಿ ಸಚಿವ ಸಂಪುಟ ಸಭೆಯನ್ನು ವಿಜಯಪುರದಲ್ಲಿ ನಡೆಸಲು ಮುಖ್ಯಮಂತ್ರಿಗಳು ಒಪ್ಪಿಗೆ ಸೂಚಿಸಿದ್ದಾರೆ. ಸಂಪುಟ ಸಭೆ ನಡೆಯುವ ಸ್ಥಳವನ್ನು ಗುರುತಿಸಬೇಕು. ಸಭೆಗೆ ಆಗಮಿಸುವ ಸಚಿವರು ಮತ್ತು ವಿವಿಧ ಇಲಾಖೆಗಳ ಪ್ರಮುಖ ಅಧಿಕಾರಿಗಳಿಗೆ ವಸತಿ ಸೇರಿದಂತೆ ಎಲ್ಲ ಸೌಕರ್ಯಗಳನ್ನು ಕಲ್ಪಿಸಬೇಕಾಗಿದೆ ಎಂದು ತಿಳಿಸಿದರು.

ಈ ಸಭೆಯಲ್ಲಿ ಜಿಲ್ಲಾಧಿಕಾರಿ ಟಿ.ಭೂಬಾಲನ್, ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ರಿಷಿ ಆನಂದ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ, ಕೈಗಾರಿಕೆ ಸಚಿವ ಸಾರ್ವಜನಿಕರ ಸಂಪರ್ಕಾಧಿಕಾರಿ ಡಾ. ಮಹಾಂತೇಶ ಬಿರಾದಾರ ಭಾಗವಹಿಸಿದ್ದರು.

# ಹಾಜಿ ಎಚ್.ಇಬ್ರಾಹಿಂ ಸಾಹೇಬರ ಜನ್ಮ ದಿನಾಚರಣೆ ರೋಗಿಗಳು ಹಣ್ಣು ಹಂಪಲು ವಿತರಣೆ



**ಬಾದಾಮಿ** : ಕರ್ನಾಟಕ ರಾಜ್ಯ ನದಾಫ/ಪಿಂಜಾರ ಸಮಾಜದ ಸಂಸ್ಥಾಪಕರು, ಹಾಗೂ ಪಿಂಜಾರ ರತ್ನ ಪ್ರಶಸ್ತಿ ಪುರಸ್ಕೃತರು, ದಿಂ.ಡಾ. ಹಾಜಿ ಹೆಚ್ ಇಬ್ರಾಹೀಮ ಸಾಹೇಬರ 94 ನೇ ಹುಟ್ಟು ಹಬ್ಬವನ್ನು ಸೋಮವಾರ ಸಮಾಜದ ಬಾದಾಮಿ ತಾಲೂಕಾ ಕಛೇರಿಯಲ್ಲಿ, ಅದ್ಯಕ್ಷರು ಹಾಗೂ ಪದಾಧಿಕಾರಿಗಳು ಸೇರಿ ಕೇಕ್ ಕಟ್ ಮಾಡುವ ಮೂಲಕ ಹುಟ್ಟು ಹಬ್ಬವನ್ನು ಆಚರಿಸಲಾಯಿತು.

ಸಮಾಜದ ಅಧ್ಯಕ್ಷ ವೈ.ಎಫ್.ಶರೀಫ ಮಾತನಾಡಿ ನಮ್ಮ ಸಮಾಜಕ್ಕೆ ಸಾಕಷ್ಟು ತ್ಯಾಗ ಮಾಡಿ ಸಮಾಜದ ಏಳ್ಗೆಗಾಗಿ, ಬಡವರ ಬದುಕಿಗೆ ಬೆಳಕಾಗಿ ನಿಂತ ದಿಟ್ಟ ಧೀರರಾದ ಇಬ್ರಾಹಿಂ ಸಾಹೇಬರ ಸಾಧನೆ ನಮ್ಮ ಸಮಾಜಕ್ಕೆ ಹೊಸ ತಿರುವನ್ನು ಕೊಟ್ಟಿದೆ. ಅವರು ನಮ್ಮ ಸಮಾಜಕ್ಕೆ ನೀಡಿದ ಕೊಡುಗೆ ಅಪಾರವಾದದ್ದು ಎಂದು ಹೇಳಿದರು.

ಸಮಾಜದ ಬಾಂಧವರೆಲ್ಲಾ ಸೇರಿ ಇಬ್ರಾಹೀಮ್ ಅವರ ಹುಟ್ಟು ಹಬ್ಬದ ನಿಮಿತ್ಯ ಸರಕಾರಿ ಬಾದಾಮಿ ತಾಲೂಕ ಆಸ್ಪತ್ರೆಯಲ್ಲಿನ ಬಡ ರೋಗಿಗಳಿಗೆ ಹಣ್ಣು ಹಂಪಲಗಳನ್ನು ವಿತರಿಸಲಾಯಿತು. ಈ ಸಂದರ್ಭದಲ್ಲಿ ಅದ್ಯಕ್ಷ ವೈ.ಎಫ್.ಶರೀಫ, ಉಪಾದ್ಯಕ್ಷರು ಜಹಾಂಗೀರಸಾಬ ನದಾಫ, ಜನಾಬ ರಫೀಕ ನದಾಫ, ಮಹಿಳಾ ಉಪಾದ್ಯಕ್ಷೆ ಅಮೀನಬಿ ನದಾಫ, ಕಾರ್ಯದರ್ಶಿ ಕಾಲೇಸಾಬ ನದಾಫ, ಮಾಜಿ ಕಾರ್ಯದರ್ಶಿ ಹಾಗೂ ಸಮಾಜದ ಹಿರಿಯರಾದ ಎಚ್.ಎಚ್.ನದಾಫ, ಅಂಜುಮನ್ ಸಂಸ್ಥೆಯ ಸದಸ್ಯ ನೂರ ಅಹ್ಮದ ನದಾಫ, ಮಾಜಿ ಖಜಾಂಚಿ ರಿಯಾಜ ಅಹ್ಮದ ನರೇಗಲ್, ಜಿಲ್ಲಾ ವಕಫ್ ಬೋರ್ಡ ಉಪಾದ್ಯಕ್ಷ ಮುರ್ತುಜ ನಾದಾಫ, ಅಂಜುಮನ್ ಸಂಸ್ಥೆ ಸದಸ್ಯರು ಜನಾಬ ಅಲ್ಲಾಸಾಬ ನದಾಫ ಸೇರಿದಂತೆ ಸಮಾಜದ ಹಿರಿಯರು, ಯುವ ಬಾಂಧವರು ಉಪಸ್ಥಿತರಿದ್ದರು.

# ಬಾದಾಮಿ ಮತಕ್ಷೇತ್ರದ ವಿವಿದ ಕಾಮಗಾರಿಗಳಿಗೆ ಭೂಮಿಪೂಜೆ

## ಗುಣಮಟ್ಟದ ಕಾಮಗಾರಿ ನಿರ್ವಹಣೆಗೆ ಅಧಿಕಾರಿಗಳಿಗೆ ಶಾಸಕ ಚಿಮ್ಮನಕಟ್ಟಿ ಸೂಚನೆ

**ಬಾದಾಮಿ** : ಮತಕ್ಷೇತ್ರದ ಸಮಸ್ಯೆಗಳನ್ನು ಪಟ್ಟಿ ಮಾಡಿ ಆದ್ಯತೆಯ ಮೇರೆಗೆ ಹಂತ ಹಂತವಾಗಿ ಈಡೇರಿಸಲಾಗುವುದು. ಕಾಮಗಾರಿಗಳು ಗುಣ ಮಟ್ಟದಿಂದ ಕೂಡಿರಬೇಕು ಹಾಗೂ ನಿಗದಿತ ಕಾಲ ಮಿತಿಯೊಳಗೆ ಮುಗಿಸಬೇಕು ಎಂದು ಗುತ್ತಿಗೆದಾರರಿಗೆ ಸೂಚಿಸಿ, ಅಧಿಕಾರಿಗಳು ಸೂಕ್ತ ಮೇಲ್ವಿಚಾರಣೆ ಮಾಡಬೇಕು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಶಾಸಕ ಭೀಮಸೇನ ಚಿಮ್ಮನಕಟ್ಟಿ ಸೂಚಿಸಿದರು.



ಅವರು ತಾಲೂಕಿನ ಕರಡಿಗುಡ್ಡ ಎಸ್.ಎನ್.ಗ್ರಾಮದಲ್ಲಿ ಸೋಮವಾರ 2023-24 ನೇ ಸಾಲಿನ ಜಿಲ್ಲಾ ಮುಖ್ಯ ರಸ್ತೆ ಸುಧಾರಣೆಯಡಿ ರೂ.800 ಲಕ್ಷ ವೆಚ್ಚದಡಿ ಆಲದಕಟ್ಟಿ ಕ್ರಾಸ್-ಮುಷ್ಠಿಗೇರಿ-ಹಳಗೇರಿ-ಬೆಳ್ಳಿಕಿಂಡಿವರೆಗೆ ಮುಖ್ಯ ರಸ್ತೆ ಸುಧಾರಣೆ ಕಾಮಗಾರಿ, ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿ, ರೂ.20 ಲಕ್ಷ ವೆಚ್ಚದಡಿ ಅಲ್ಪಸಂಖ್ಯಾತರ ಕಾಲೋನಿಯಲ್ಲಿ ಸಿಸಿ ರಸ್ತೆ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿದರು.

ಈ ಸಂದರ್ಭದಲ್ಲಿ ಬಾಗಲಕೋಟೆ-ವಿಜಯಪೂರ ಅವಳಿ ಜಿಲ್ಲೆಯ ಹಾಲು ಒಕ್ಕೂಟದ ಅಧ್ಯಕ್ಷ ಈರಣ್ಣ ಕರಿಗೌಡರ, ಗ್ರಾ.ಪಂ. ಅಧ್ಯಕ್ಷ ಹನಮಂತ ಸಿದ್ದನ್ನವರ, ಉಪಾಧ್ಯಕ್ಷೆ ಲಕ್ಷ್ಮವ್ವ ನರಿ, ಸದಸ್ಯರಾದ ಯಲ್ಲಪ್ಪ ಮಣ್ಣೂರ, ಮಾರುತಿ ಪೂಜಾರ, ಭೀಮಪ್ಪ ಶೆಟ್ಟೆಪ್ಪನವರ, ಬಸವಂತ ತಳವಾರ, ಅನ್ನಕ್ಕ ನರಿ, ನೀಲವ್ವ ಜಲಗೇರಿ, ಸಾವಿತ್ರಿ ಹಿರಿಯನ್ನವರ, ಹನಮಂತ ಕಮಲದಿನ್ನಿ ಸೇರಿದಂತೆ ಗ್ರಾಮದ ಗುರುಹಿರಿಯರು, ಮುಖಂಡರು ಹಾಜರಿದ್ದರು.

# ಗ್ರಾಮ ವ್ಯಾಪ್ತಿಯ ಎಲ್ಲ ರಸ್ತೆಗಳು ಥಳುಕು, ಬಳುಕು ಗ್ರಾಮ ಸಂಪರ್ಕ ರಸ್ತೆಗಳೇ ಹುಳುಕು, ಕೊಳಕು







**ಇಲಾಹಿ ಇ. ಜಮಖಂಡಿ.**

**ಚಿಮ್ಮಡ:** ಕ್ಷೇತ್ರವ್ಯಾಪ್ತಿಯ ಬಹುತೇಕ ರಸ್ತೆಗಳು ಹೆದ್ದಾರಿಗಳಾಗಿ ಮಾರ್ಪಟ್ಟಿದ್ದು, ಗ್ರಾಮೀಣ ಭಾಗದ ರಸ್ತೆಗಳು ಕೂಡ ವಿಸ್ತಾರಗೊಂಡು ಥಳುಕು ಬಳುಕಿನಿಂದ ಕೂಡಿವೆ ಆದರೆ ಗ್ರಾಮಕ್ಕೆ ಸಂಪರ್ಕಗೊಳ್ಳುವ ರಸ್ತೆಗಳು ಮಾತ್ರ ಬಯಲು ಬಹಿರ್ದೆಸೆಯಿಂದಾಗಿ ಕೊಳಕಿನಿಂದ ಕೂಡಿದ್ದು ದುರ್ವಾಸನೆಯಿಂದಾಗಿ ಈ ರಸ್ತೆಗಳನ್ನು ದುರಸ್ತಿಗೊಳಿಸಲು ಗುತ್ತಿಗೆದಾರರೇ ಹಿಂದೇಟು ಹಾಕುವಷ್ಟು ಹದಗೆಟ್ಟಿವೆ.

ಗ್ರಾಮದಿಂದ ಸಂಪರ್ಕಗೊಳ್ಳುವ ರಬಕವಿ ಮಹಾಲಿಂಗಪುರ ರಸ್ತೆಯನ್ನು ಸುಮಾರು 20 ಕೋಟಿ ಅನುದಾನದಲ್ಲಿ ಹೆದ್ದಾರಿಯಾಗಿ ಪರಿವರ್ತಿಸಲಾಗಿದೆ, ಗ್ರಾಮದಿಂದ ಯರಗಟ್ಟಿ ಮಾರ್ಗವಾಗಿ ತೇರದಾಳ ಸಂಪರ್ಕಗೊಳ್ಳುವ ರಸ್ತೆಯೂ ಹೆದ್ದಾರಿಯಾಗಿ ಮಾರ್ಪಟ್ಟಿದೆ, ಅಲ್ಲದೇ ಶ್ರೀ ಪ್ರಭುಲಿಂಗೇಶ್ವರ ದೇವಸ್ಥಾನ ಮಾರ್ಗವಾಗಿ ನಾವಲಗಿ ಸಂಪರ್ಕಗೊಳ್ಳುವ ರಸ್ತೆ ಸೇರಿದಂತೆ ಬಹುತೇಕ ರಸ್ತೆಗಳು ರಾಷ್ಟ್ರೀಯ ಹೆದ್ದಾರಿ ಮಾದರಿಯಲ್ಲೇ ನಿರ್ಮಾಣಗೊಂಡಿರುವುದರಿಂದ ಈ ಭಾಗದ ವಾಹನ ಸವಾರರು ಅತೀವ ಸಂತಸ ವ್ಯಕ್ತಪಡಿಸುತ್ತಾರೆ, ಆದರೆ ಬಳಗಾರ ಕ್ರಾಸ್‌ನಿಂದ ಗ್ರಾಮಕ್ಕೆ ಸಂಪರ್ಕಿಸುವ ಅರ್ಧ ಕಿ.ಮಿ ರಸ್ತೆ ಹಾಗೂ ಜಗದಾಳ ಮಾರ್ಗವಾಗಿ ಜಮಖಂಡಿಗೆ ಸಂಪರ್ಕಗೊಳ್ಳುವ ರಸ್ತೆಗಳು ತೀರ ಇಕ್ಕಟ್ಟಾಗಿದ್ದು ಒಂದು ವಾಹನ ಚಲಿಸುವಾಗ ಇನ್ನೊಂದು ವಾಹನ ಎದುರಿಗೆ ಬಂದರೆ ಚಾಲಕರ ಫಜೀತಿ ಹೇಳತೀರದು, ಅದರಲ್ಲೂ ಗ್ರಾಮಸ್ಥರು ಬಯಲು ಬಹಿರ್ದೆಸೆಗೆ ಈ ರಸ್ತೆ ಪಕ್ಕದ ಜಾಗವನ್ನೇ ಬಳಸುವುದರಿಂದ ಸಾರ್ವಜನಿಕರು ಮೂಗು ಮುಚ್ಚಿಕೊಂಡೇ ಗ್ರಾಮಕ್ಕೆ ಪ್ರವೇಶಿಸುವಂತಾಗಿದೆ ಅಲ್ಲದೇ ಈ ಎರಡೂ ರಸ್ತೆಗಳು ಅಲ್ಲಲ್ಲಿ ಬಹಳಷ್ಟು ಹಾಳಾಗಿರುವುದರಿಂದ ಈ ರಸ್ತೆಗಳಲ್ಲಿ ಸಂಚರಿಸುವುದೇ ಸಾರ್ವಜನಿಕರಿಗೆ ದುಸ್ತರವಾಗಿ ಪರಿಣಮಿಸಿದೆ.

ಹಲವು ಗದ್ದೆಗಳಿಗೆ ತೆರಳುವ ರಸ್ತೆಗಳನ್ನೂ ಕೂಡ ಟಾರ್ ರಸ್ತೆಗಳಾಗಿ ನಿರ್ಮಾಣ ಮಾಡಿರುವ ತೇರದಾಳ ಶಾಸಕರಾದ ಸಿದ್ದು ಸವದಿಯವರು ಗ್ರಾಮ ಪ್ರವೇಶಿಸಲು ಪ್ರಮುಖವಾಗಿರುವ

ಈ ಎರಡೂ ರಸ್ತೆಗಳನ್ನು ದುರಸ್ತಿಗೊಳಿಸಿ ಮಲೀನ ಮುಕ್ತಗೊಳಿಸುವ ಕುರಿತು ಕ್ರಮ ಕೈಗೊಳ್ಳಬೇಕಾಗಿದೆ ಎಂದು ಗ್ರಾಮಸ್ಥರ ಅಳಲು ತೋಡಿಕೊಂಡಿದ್ದಾರೆ.

ಗ್ರಾಮದಲ್ಲಿ ಈಗಾಗಲೇ ರಿಂಗ್ ರಸ್ತೆ ನಿರ್ಮಾಣಕ್ಕೆ ಅನುದಾನ ಮಂಜುರಾಗಿದ್ದು ಶೀಘ್ರವೇ ಕಾಮಗಾರಿ ಪ್ರಾರಂಭವಾಗಲಿದೆ ಅಲ್ಲದೇ ಗ್ರಾಮದಿಂದ ಬಳಗಾರ ಗ್ರಾಸ್ ವರೆಗಿನ ರಸ್ತೆಯನ್ನೂ ಅಭಿವೃದ್ದಿ ಪಡಿಸಲಾಗುವುದು. ಗ್ರಾಮದಲ್ಲಿ ಅತೀ ಹೆಚ್ಚು ಶೌಚಾಯಲಯ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗಿದೆ ಅಲ್ಲದೇ ಮನೆಯಲ್ಲಿ ಸ್ಥಳಾವಕಾಶದ ಕೊರತೆಯಿರುವ ಪ್ರತೀ ಕುಟುಂಬಕ್ಕೂ ಅನುಕೂಲವಾಗುವಂತೆ ಸಾಮೂಹಿಕ ಶೌಚಾಲಯ ನಿರ್ಮಿಸಲಾಗಿದೆ ಅದರೂ ಜನತೆ ಬಹಿರ್ದೆಸೆಗೆ ಬಯಲನ್ನೆ ಅವಲಂಬಿಸಿರುವುದು ದುರ್ದೈವ. ಗ್ರಾಮವನ್ನು ಸ್ವಚ್ಛವಾಗಿಟ್ಟುಕೊಳ್ಳುವುದು ಸರಕಾರದ ಕರ್ತವ್ಯ ಮಾತ್ರವಲ್ಲ ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ.

। ಸಿದ್ದು ಸವದಿ
ಶಾಸಕರು ತೇರದಾಳ ಮತಕ್ಷೇತ್ರ.

## ಅಕ್ರಮದಾಸ್ತಾನು, ಕಾಳಸಂತೆ ಮೇಲೆ ನಿಗಾ । ಜಿಲ್ಲೆಯಲ್ಲಿ ಮಾಕ್‌ಡ್ರೀಲ್

# ತುರ್ತು ಪರಿಸ್ಥಿತಿ ಎದುರಿಸಲು ಜಿಲ್ಲಾಡಳಿತ ಸನ್ನದ್ದ: ಡಿಸಿ ಜಾನಕಿ

**ಬಾಗಲಕೋಟೆ :** ಯುದ್ದದಂತಹ ಸನ್ನಿವೇಶ ಹಾಗೂ ತುರ್ತು ಪರಿಸ್ಥಿತಿ ಎದುರಾದಲ್ಲಿ ಸಾರ್ವಜನಿಕರರಕ್ಷಣೆಗೆ ಜಿಲ್ಲಾಡಳಿತ ಸನ್ನದ್ದವಾಗಿದೆ ಎಂದು ಜಿಲ್ಲಾಧಿಕಾರಿ ಜಾನಕಿ ಕೆ.ಎಂ ತಿಳಿಸಿದರು.

ರವಿವಾರ ಯುದ್ದ ಅಥವಾ ಇನ್ನಿತರ ವಿಪತ್ತು ನಿರ್ವಹಣೆಕುರಿತುತುರ್ತು ಕ್ರಮಕೈಗೊಳ್ಳಲು ಗೂಗಲ್ ಮೀಟ್ ಮೂಲಕ ಉಪವಿಭಾಗಾಧಿಕಾರಿಗಳು ಹಾಗೂ ತಹಶೀಲ್ದಾರರೊಂದಿಗೆ ಜರುಗಿದ ಸಭೆಯಅಧ್ಯಕ್ಷತೆ ವಹಿಸಿ ಮಾತನಾಡಿದಅವರುರಾಜ್ಯದ ಮುಖ್ಯಮಂತ್ರಿಗಳು ನಾಗರಿಕರ ಸುರಕ್ಷತೆದೃಷ್ಟಿಯಿಂದಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆಯೊಂದಿಗೆಕಟ್ಟುನಿಟ್ಟಿನಕ್ರಮಕೈಗೊಳ್ಳಲುಈಗಾಗಲೇ ಸೂಚನೆ ನೀಡಿದ್ದಾರೆ.ಈ ನಿಟ್ಟಿನಲ್ಲಿಜಿಲ್ಲೆಯಲ್ಲಿಎಲ್ಲರೀತಿಯ ಕ್ರಮಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಮೂರು ತಿಂಗಳವರೆಗೆ ಬೇಕಾಗುವಷ್ಟು ಆಹಾರಧಾನ್ಯಗಳ ದಾಸ್ತಾನುಇಡಲಾಗುತ್ತಿದೆ.ಅಲ್ಲದೇಅಕ್ರಮವಾಗಿದಾಸ್ತಾನು ಹಾಗೂ ಕಾಳಸಂತೆಯಲ್ಲಿ ಮಾರಾಟವಾಗದಂತೆ ಹೆಚ್ಚಿನ ನಿಗಾ ವಹಿಸಲು ಆಹಾರಇಲಾಖೆಯಜಂಟಿ ನಿರ್ದೇಶಕರಿಗೆ ಸೂಚನೆ ನೀಡಲಾಗಿದೆ.ಕುಡಿಯಲು ನೀರು ಹಾಗೂ ಆರೋಗ್ಯ ಸೌಲಭ್ಯಕ್ಕಾಗಿ ಬೆಡ್‌ಗಳ ಹಾಗೂ ಔಷಧಿಗಳ ದಾಸ್ತಾನುಇಡಲು ತಿಳಿಸಲಾಗಿದೆ.ತುರ್ತು ವಾಹನಗಳಿಗೆ ಬೇಕಾಗುವ ಇಂಧನ ವ್ಯವಸ್ಥೆ ಸಹ ಮಾಡಿಕೊಳ್ಳಲಾಗುತ್ತಿದೆ. ಅಗ್ನಿಶಾಮಕ ದಳದವರು ದಿನದ 24 ಗಂಟೆಗಳ ಕಾಲ ಸನ್ನದ್ದ ಸ್ಥಿತಿಯಲ್ಲಿರಲು ಸೂಚಿಸಲಾಗಿದೆ.

ಸಾಮಾಜಿಕ ತಾಣಗಳಲ್ಲಿ ಹರಡುವ ಸುಳ್ಳು ಸುದ್ದಿಗಳ ಮೇಳ ನಿರಂತರನಿಗಾವಹಿಸಲಾಗುತ್ತಿದ್ದು,ವದಂತಿಹರಡುವುವವರ ವಿರುದ್ದಕ್ರಮ ಕೈಗೊಳ್ಳಲಾಗುತ್ತಿದೆ.ಯಾವುದೇ ವದಂತಿಗಳಿಗೆ ಕಿವಿಗೊಡದೇ ಸಾರ್ವಜನಿಕರು ಸೂಕ್ತ ತಿಳುವಳಿಕೆ ಹೊಂದುವಅಗತ್ಯವಿದೆ.ದಿನದ 24 ಗಂಟೆಗಳ ಕಾಲ ಜಿಲ್ಲಾ ಹಾಗೂತಾಲೂಕಾಮಟ್ಟದಲ್ಲಿಸಹಾಯವಾಣಿಕೇಂದ್ರಗಳನ್ನು ತೆರಯಲಾಗಿದೆ.ಸಹಾಯವಾಣಿ ಕೇಂದ್ರಗಳು ವ್ಯವಸ್ಥಿತವಾಗಿ ನಡೆಯಲುಜಿಲ್ಲಾ ಹಾಗೂ ತಾಲೂಕಾ ಮಟ್ಟದಲ್ಲಿ ನೋಡಲ್ ಅಧಿಕಾರಿಗಳನ್ನು ನೇಮಿಸಲು ಸೂಚಿಸಲಾಗಿದೆ.ಸಹಾಯವಾಣಿಕೇಂದ್ರದ ಪ್ರತಿದಿನದ ವರದಿಯನ್ನುನೀಡಲು ಸೂಚನೆ ನೀಡಲಾಗಿದೆಎಂದರು.

ಕೇಂದ್ರ ಹಾಗೂ ರಾಜ್ಯ ಸರಕಾರದಿಂದ ನೀಡಲಾಗಿರುವ ಮಾರ್ಗಸೂಚಿಗಳನ್ನು ಗ್ರಾಮ ಪಂಚಾಯತ ಮಟ್ಟದಲ್ಲಿಯೂತಲುಪಿಸುವ ಕೆಲಸವಾಗಬೇಕು.ತುರ್ತು ಪರಿಸ್ಥಿತಿಯಲ್ಲಿ ಅಧಿಕಾರಿಗಳು ಜವಾಬ್ದಾರಿಯಿಂದ ಕೆಲಸ ನಿರ್ವಹಿಸಬೇಕು. ಮಿಲಿಟರಿಯಲ್ಲಿ ಸೈನಿಕರುಯಾವ ಸ್ಥಿತಿಯಲ್ಲಿ ಇದ್ದಾರೆಅದೇ ಸ್ಥಿತಿಯಲ್ಲಿ ನಾವು ಇದ್ದೇವೆ ಎಂಬ ಭಾವನೆಇಟ್ಟುಕೊಂಡು ಕೆಲಸ ಮಾಡಲು ತಿಳಿಸಿದರು.ಜಿಲ್ಲೆಯ ವಿವಿದೆಡೆಮಾಕ್‌ಡ್ರೀಲ್ ನಡೆಸುವ ಮೂಲಕ ಜನರಲ್ಲಿಜಾಗೃತಿ ಮೂಡಿಸಲಾಗುತ್ತಿದೆಎಂದುತಿಳಿಸಿದರು.

ಸಭೆಯಲ್ಲಿ ಉಪವಿಭಾಗಾಧಿಕಾರಿಗಳಾದ ಸಂತೋಷಜಗಲಾಸರ, ಶ್ವೇತಾ ಬೀಡಿಕರ, ನಗರಾಭಿವೃದ್ದಿಕೋಶದ ಪ್ರಭಾರಿಯೋಜನಾ ನಿರ್ದೇಶಕ ಸುರಖೋಡ ಸೇರಿದಂತೆಆಯಾತಾಲೂಕಿನ ತಹಶೀಲ್ದಾರ ಹಾಗೂ ನಗರ ಸ್ಥಳೀಯ ಸಂಸ್ಥೆಗಳ ಮುಖ್ಯಾಧಿಕಾರಿಗಳು ಉಪಸ್ಥಿತರಿದ್ದರು.

**ಸಹಾಯವಾಣಿಕೇಂದ್ರ ಸ್ಥಾಪನೆ** : ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಸಾರ್ವಜನಿಕರಿಗೆ ಅನುಕೂಲವಾಗುವ ನಿಟ್ಟಿನಲ್ಲಿಜಿಲ್ಲೆಯಲ್ಲಿ ಸಹಾಯವಾಣಿಕೇಂದ್ರ ಸ್ಥಾಪಿಸಲಾಗಿದೆ. ಜಿಲ್ಲಾಧಿಕಾರಿಗಳ ಕಚೇರಿ ದೂಸಂ.08354-236240, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿಕಂಟ್ರೋಲ್‌ರೂಮ್ ನಂ.08354-235279, 9480803900, ಜಿಲ್ಲಾ ಅಗ್ನಿಶಾಮಕದಳ 101, 08354-236101ಗೆ ಕರೆ ಮಾಡಬಹುದಾಗಿದೆ.

# ಶಾಂತಿ, ಸಮಾನತೆ, ಏಕತೆಗಾಗಿ ಹೋರಾಡಿದವರು ಭಗವಾನ್ ಬುದ್ದರು–ಶಾಸಕರಾದ ಕೆ.ರಾಘವೇಂದ್ರ ಹಿಟ್ನಾಳ



**ಕೊಪ್ಪಳ :** ಶಾಂತಿ, ಸಮಾನತೆ, ಏಕತೆಗಾಗಿ ಹೋರಾಡಿದವರು ಭಗವಾನ್ ಬುದ್ದರೆಂದು ಇತಿಹಾಸದ ಚರಿತ್ರೆಗಳಲ್ಲಿದೆ ಎಂದು ಕೊಪ್ಪಳ ಶಾಸಕರಾದ ಕೆ.ರಾಘವೇಂದ್ರ ಹಿಟ್ನಾಳ ಹೇಳಿದರು.

ಅವರು ಕೊಪ್ಪಳ ನಗರದ ಡಾ. ಬಿ.ಆರ್. ಅಂಬೇಡ್ಕರ್ ವೃತ್ತದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕೊಪ್ಪಳ ನಗರಸಭೆ ಇವರ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾಗಿದ್ದ ಶ್ರೀ ಭಗವಾನ್ ಬುದ್ದರ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಭಾರತದಲ್ಲಿ ಅನೇಕ ಧರ್ಮಗಳು, ಪಂಥಗಳಿವೆ. ಅವುಗಳೆಲ್ಲವನ್ನು ಸುಧಾರಿಸಿ ಹಾಗೂ ಒಂದುಗೂಡಿಸುವ ಕಲ್ಪನೆ ಗೌತಮ್ ಬುದ್ದನವರದ್ದಾಗಿತ್ತು. 'ಆಸೆಯೆ ದುಃಖಕ್ಕೆ ಮೂಲ' ಎಂಬ ಗಾದೆ ಮಾತಿನಂತೆ ಯಾವುದೇ ಆಸೆಯಿಲ್ಲದೇ ಧರ್ಮವನ್ನು ಕಟ್ಟುವಂತಹ ಕೆಲಸವನ್ನು ಭಗವಾನ್ ಬುದ್ದರುಮಾಡಿದ್ದಾರೆ.ಅದಕ್ಕಾಗಿಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಬೌದ್ದ ಧರ್ಮ ಸ್ವೀಕಾರ ಮಾಡಿದ್ದಾರೆ. ಕರ್ನಾಟಕದ ಇತಿಹಾಸದಲ್ಲಿ ಮೊಟ್ಟಮೊದಲನೇ ಬಾರಿಗೆ ಭಗವಾನ್ ಬುದ್ದರ ಜಯಂತಿಯನ್ನು ಸರ್ಕಾರದಿಂದ ಆಚರಿಸಲು ಅವಕಾಶ ಕಲ್ಪಿಸಿದ್ದಕ್ಕಾಗಿ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರಿಗೆ ಅಭಿನಂದನೆ ಸಲ್ಲಿಸುತ್ತೇನೆ.ಮಹನಿಯರಜಯಂತಿಗಳನ್ನು ಆಚರಿಸುವ ಮೂಲಕ ಅವರ ಚರಿತ್ರೆಗಳನ್ನು ಮೆಲಕುಹಾಕಲುಅವಕಾಶವಾಗಿದೆಎಂದರು. ಬಸವಣ್ಣನವರಿಂದ ಡಾ. ಅಂಬೇಡ್ಕರ್ ರವರೆಗೆ ಹಲವಾರು ಮಹನಿಯರು ಸಮಾಜ ಸುಧಾರಣೆಗಾಗಿ ಹಾಗೂ ಸರ್ವರಿಗೂ ಸಮ ಬಾಳು ಸಮ ಪಾಲು ನೀಡಲು ಪ್ರಯತ್ನಿಸಿದ್ದಾರೆ. ಈ ಹಿನ್ನೆಲೆಯಲ್ಲಿ ನಮ್ಮ ಸರ್ಕಾರವು ಐದು ಗ್ಯಾರಂಟಿ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನ ಮಾಡುವುದರ ಮೂಲಕ ಸಮಾಜದ ಕಟ್ಟಕಡೆಯ ವ್ಯಕ್ತಿಗಳಿಗೂ ಸಹ ಸಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕವಾಗಿ ಶಕ್ತಿತುಂಬುವಂತಹಕೆಲಸಮಾಡಿದೆ.ಇಂತಹ ಮಹತ್ತರ ಯೋಜನೆಗಳಲ್ಲೊಂದಾದ ಗೃಹಲಕ್ಷ್ಮೀ ಯೋಜನೆಯಡಿ ಬಂದ ಹಣವನ್ನು ಕೂಡಿಟ್ಟು ನಮ್ಮ ಜಿಲ್ಲೆಯ ಮಹಿಳೆಯೊಬ್ಬರು ತಮ್ಮ ಜಮೀನಿನಲ್ಲಿ ಬೋರ್‌ವೆಲ್ ಕೊರೆಯಿಸಿ ನೀರಾವರಿ ಕೃಷಿಯನ್ನು ಮಾಡುತ್ತಿದ್ದಾರೆ. ಅಲ್ಲದೇ ಈ ಯೋಜನೆಯ ಹಣದಿಂದ ಮಹಿಳೆಯರು ತಮ್ಮ ಮಕ್ಕಳಿಗೆ ಪುಸ್ತಕ, ಲ್ಯಾಪ್‌ಟ್ಯಾಪ್ ಕೊಡಿಸಿ, ಸರ್ಕಾರದ ಯೋಜನೆಯನ್ನು ಸದ್ಬಳಕೆ ಮಾಡಿಕೊಂಡಿದ್ದಾರೆ ಎಂದು ಹೇಳಿದರು.

ವಿಧಾನ ಪರಿಷತ್ ಸದಸ್ಯರಾದ ಹೇಮಲತಾ ನಾಯಕ ಅವರು ಮಾತನಾಡಿ, ಭಗವಾನ್ ಬುದ್ದರು ರಾಜಾಡಳಿತವನ್ನು ಬಿಟ್ಟು ಸನ್ಯಾಸತ್ವವನ್ನು ಸ್ವೀಕರಿಸಿದರು. ಸಿದ್ಧಾರ್ಥ ಬುದ್ಧನಾಗಬೇಕಾದರೆ, ತನ್ನ ಸಾಮ್ರಾಜ್ಯದಲ್ಲಿನಜನರಕಷ್ಟದಲ್ಲಿರುವುದನ್ನು ಕಂಡು ತನ್ನ ರಾಜ್ಯವೈಭೋಗ ತೋರದು ತಡರಾತ್ರಿಯಲ್ಲಿ ಮನೆಬಿಟ್ಟು ಬಂದು ಜಗತ್ತಿಗೆ ಶಾಂತಿ ಬೋಧನೆಗಳನ್ನು ಮಾಡಿದರು. ಬುದ್ದ, ಬಸವ ಹಾಗೂ ಅಂಬೇಡ್ಕರ್ ರವರ ಮಾರ್ಗದರ್ಶನದಲ್ಲಿ ನಾವೆಲ್ಲರು ನಡೆಯಬೇಕು ಎಂದರು.

ಕೊಪ್ಪಳ ನಗರಸಭೆ ಅಧ್ಯಕ್ಷರಾದ ಅಮ್ಜದ್ ಪಟೇಲ್ ಅವರು ಮಾತನಾಡಿ, ಭಗವಾನ್ ಬುದ್ದ, ವಿಶ್ವಗುರು ಬಸವಣ್ಣ ಹಾಗೂ ವಿಶ್ವಜ್ಞಾನಿ ಡಾ. ಬಿ.ಆರ್. ಅಂಬೇಡ್ಕರ್ ರವರು ಈ ಭೂಮಿಗೆ ಅವತರಿಸಿದ ಮಹಾನ ಪುರುಷರಾಗಿದ್ದಾರೆ. ಜಗತ್ತಿಗೆ ಭಗವಾನ್ ಬುದ್ದರು ಅರಿವೆಂಬ ಬೆಳಕನ್ನು ನೀಡಿದ್ದಾರೆ. ಬಸವಣ್ಣನವರು ಮಾನವೀಯತೆಯ ಭಾವನೆಗಳನ್ನು ನೀಡಿದರೆ, ಅಂಬೇಡ್ಕರ್ ರವರು ಸಮಾನತೆಯನ್ನು ನೀಡಿದ್ದಾರೆ. ಬುದ್ದ ಎಂಬ ಪದದ ಅರ್ಥ ತಿಳಿದವನು, ಜ್ಞಾನಿ, ಅರಿತವನು ಎಂದರ್ಥ. ಇಂತಹ ಮಹನೀಯರ ಮಾರ್ಗದಲ್ಲಿ ನಡೆದರೆ, ನಮ್ಮ ಜೀವನ ಯಶಸ್ವಿಯಾಗುತ್ತದೆ ಎಂದರು.

ಕೊಪ್ಪಳ ಶಿಕ್ಷಣಾಧಿಕಾರಿ ಶಂಕರಯ್ಯ ಟಿ.ಎಸ್. ಅವರು ಶ್ರೀ ಭಗವಾನ್ ಬುದ್ದರ ಕುರಿತು ವಿಶೇಷ ಉಪನ್ಯಾಸ ನೀಡಿ, 2500 ವರ್ಷಗಳ ಹಿಂದೆ ಕ್ರಿ.ಪೂ 563 ರಲ್ಲಿ ವೈಶಾಖ ಪೂರ್ಣಿಮೆ ದಿನದಂದು ಭಗವಾನ್ ಬುದ್ದರ ಜನನವಾಯಿತು. ಈ ದಿನ ಜಗತ್ತಿಗೆ ದೊಡ್ಡ ಜ್ಯೋತಿನೀಡುವಸಂಕೇತವಾಗಿದೆ.ಮೇಲು–ಕೀಳು, ಬಡವ–ಬಲ್ಲಿಗ, ಬಂಡವಾಳ ಶಾಹಿ ಮತ್ತು ಕಾರ್ಮಿಕ ವರ್ಗ, ಹೀಗೆ ವಿವಿಧ ವರ್ಗಗಳಲ್ಲಿ ತಾರತಮ್ಯ, ಸಮಾನತೆಗಳು, ಅಸಹಿಷ್ಣತೆಗಳು ತುಂಬಿರುವಂತಹ ಕಾಲದಲ್ಲಿ ಇಡೀ ಪ್ರಪಂಚದಲ್ಲಿರುವ ಎಲ್ಲಾ ಮನುಷ್ಯರು ಸರ್ವ ಸ್ವತಂತ್ರರು, ಸಮಾನರು. ಇವರೆಲ್ಲರು ಕೂಡ ಸ್ವತಂತ್ರ, ಸಮಾನತೆ ಮತ್ತು ಸಹಬಾಳ್ವೆಯಿಂದ ಬಧುಕಬೇಕು. ಒಬ್ಬ ಮನುಷ್ಯ, ಇನ್ನೊಬ್ಬ ಮನುಷ್ಯನನ್ನು ಮನುಷ್ಯತ್ವದ ಗುಣಗಳಿಂದ ಕಾಣಬೇಕೆಂದು ಬೋಧನೆ ಮಾಡಿರುವ ಏಕೈಕ ವ್ಯಕ್ತಿ ಭಗವಾನ್ ಬುದ್ದರು ಆಗಿದ್ದಾರೆಂದು ವಿವರವಾಗಿ ತಿಳಿಸಿದರು.

ಕಾರ್ಯಕ್ರಮದಲ್ಲಿ ಉಪವಿಭಾಗಾಧಿಕಾರಿ ಕ್ಯಾಪ್ಟನ್ ಮಹೇಶ ಮಾಲಗಿತ್ತಿ, ಕೊಪ್ಪಳ ನಗರಸಭೆ ಸದಸ್ಯರಾದ ಸಿದ್ದಣ್ಣ ಮ್ಯಾಗೇರಿ, ಮುತ್ತುರಾಜ ಕುಷ್ಟಗಿ, ರಾಜಶೇಖರ ಆಡೂರ, ಗುರುರಾಜ ಹಲಗೇರಿ, ಅಕ್ಬರಪಾಶಾ ಪಲ್ಟನ್, ಸಮಾಜದ ಮುಖಂಡರಾದ ಯಲ್ಲಪ್ಪ ಬಳಗನೂರ, ಸಿದ್ರಾಮಪ್ಪ ಹೊಸಮನಿ, ರಾಮಣ್ಣ ಕಲ್ಲಣ್ಣವರ್, ಜಿ.ಎಂ.ಬೆಲ್ಲದ್, ಪ್ರಸನ್ನ ಗಡಾದ್, ಶಿವಣ್ಣ ಹಂದ್ರಾಳ, ಯಲ್ಲಮ್ಮ ಗಿಣಿಗೇರಿ, ಮಹಾಲಕ್ಷ್ಮೀ ಕಂದಾರಿ ಸೇರಿದಂತೆ ಹಲವಾರು ಮುಖಂಡರು ಪಾಲ್ಗೊಂಡಿದ್ದರು.

# ನೆಲಮೂಲ ಸಂಸ್ಕೃತಿ ಮೂಲ ಜನಪದ ಉಳಿಸಿ–ಬೆಳೆಸೋಣ: ಶರಣಪ್ಪ ವಡಿಗೇರಿ



**ಕೊಪ್ಪಳ :** ನಮ್ಮ ನಾಡಿನ ನೆಲದ ಮೂಲ ಸಂಸ್ಕೃತಿ, ಮೂಲ ಜನಪದವನ್ನು ಉಳಿಸಿ–ಬೆಳೆಸೋಣ ಎಂದು ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಶ್ರೀ ಶರಣಪ್ಪ ವಡಿಗೇರಿ ಮಾತನಾಡಿದರು.

ಅವರುತಳುವಗೇರಾಗ್ರಾಮದಲ್ಲಿಶ್ರೀಶರಣಬಸವೇಶ್ವರ ದೇವಸ್ಥಾನದ ಆವರಣದಲ್ಲಿ ನಡೆದ ಜನಜಾಗೃತಿ ಕಲಾ ರಂಗಸಂಸ್ಥೆ(ರಿ)ಕುಷ್ಟಗಿ,ಕನ್ನಡಮತ್ತುಸಂಸ್ಕೃತಿಇಲಾಖೆ ಬೆಂಗಳೂರು ಇವರ ಸಹಯೋಗದಲ್ಲಿ 2023–24ನೇ ಸಾಲಿನ ಸಂಘಸಂಸ್ಥೆಗಳ ಧನಸಹಾಯ ಯೋಜನೆ ಅಡಿಯಲ್ಲಿ ನಡೆದ ಮೂಲ ಜನಪದ ಸಂಭ್ರಮ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಮಾತನಾಡಿದರು.

ಜನರ ಮಾತಿನೊಂದಿಗೆ ಬೆಳೆದು ಉಳಿದು ಬಂದಿರುವ ಮೂಲ ಜನಪದ ಸಾಹಿತ್ಯವು ನಮ್ಮ ಸಂಸ್ಕೃತಿ ಪರಂಪರೆಯನ್ನು ಬಿಂಬಿಸುವ ನಮ್ಮ ಬದುಕಿನ ಕನ್ನಡಿಯಾಗಿದೆ ಹಾಗೂ ನಮ್ಮ ನೆಲಮೂಲ ಸಂಸ್ಕೃತಿಯಾಗಿದೆ. ಪ್ರಸ್ತುತ ದಿನಮಾನದಲ್ಲಿ ಜನಪದ ಗೀತೆಗಳ ಹೆಸರಲ್ಲಿ ದ್ವಂದ್ವಾರ್ಥದ, ಯುವ ಜನತೆಯ ದಾರಿ ತಪ್ಪಿಸುವ ಹಾಡುಗಳು ಬರುತ್ತಿವೆ. ಅವೆಲ್ಲಾ ಜನಪ್ರಿಯ ಗೀತೆ, ಟ್ರ್ಯಾಕ್ಟರ್ ಪದಗಳೇ ಆಗಿವೆ ಹೊರತು ಮೂಲ ಜನಪದಗೀತೆಗಳು ಅಲ್ಲಾ. ನಮ್ಮ ಸಂಸ್ಕೃತಿ, ಜನಪದ ಕಲೆಗಳನ್ನು ಉಳಿಸಲು ಹಲವಾರು ಜಾಗೃತಿ ಕಾರ್ಯಕ್ರಮಗಳನ್ನು ಮಾಡಲಾಗುತ್ತಿದ್ದು, ಯುವ ಪೀಳಿಗೆಗೆ ಸರಕಾರವು ಸಂಘ–ಸಂಸ್ಥೆಗಳ ಧನಸಹಾಯ ಯೋಜನೆಗಳ ಮೂಲಕ ಇಂತಹ ಮಹತ್ವಪೂರ್ಣ ಕಾರ್ಯಕ್ರಮನ್ನು ಏರ್ಪಡಿಸಿ ಪ್ರೋತ್ಸಾಹ ನೀಡುತ್ತಿದೆ ಎಂದರು.

ಗ್ರಾಮ ಪಂಚಾಯತಿ ಸದಸ್ಯರಾದ ಶರಣಗೌಡ ಮಾಲಿಪಾಟೀಲ ಅವರು ತಮಟೆ ಬಾರಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಗ್ರಾ.ಪಂ.ಸದಸ್ಯರಾದ ಅಮೀರ್ ರಂಜಾನ್ ಮುಲ್ಲಾ, ದೇವಸ್ಥಾನ ಸಮಿತಿ ಅಧ್ಯಕ್ಷರಾದ ಬಸವರಾಜ ಮೇಳಿ ಹಾಗೂ ಮತ್ತಿತರರಿದ್ದರು.

ನಂತರ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ನಿಂಗಪ್ಪ ಸೊಲ್ಲಾಪೂರ ತಂಡದವರಿಂದ ಗೀ ಗೀ ಪದಗಳು, ದುರಗಪ್ಪ ಅಡವಿಭಾವಿ ಅವರಿಂದ ರಂಗಗೀತೆಗಳು, ಶರಣಪ್ಪ ಬನ್ನಿಗೋಳ ಅವರಿಂದ ಸುಗ್ಗಿಯ ಪದಗಳು, ಗುರಪ್ಪ ಉಪನಾಳ ತಂಡದವರಿಂದ ಭಜನಾಪದ ಮತ್ತು ದೇವೇಂದ್ರಪ್ಪ ಕಮ್ಮಾರ ಅವರಿಂದ ತತ್ವಪದಗಳ ಕಾರ್ಯಕ್ರಮ ಜನಮನ ರಂಜಿಸಿದವು. ಕೊನೆಯಲ್ಲಿ ಶ್ರೀಧರ ಪತ್ತಾರ ತಬಲಾಜಿ ಅವರು ವಂದಿಸಿದರು.

# ಮಕ್ಕಳು ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳನ್ನು ಕಲಿತುಕೊಳ್ಳಿ: ಶೇಖರಗೌಡ ಜಿ ರಾಮತ್ನಾಳ್



**ಕೊಪ್ಪಳ :** ಮಕ್ಕಳಿಗೆ ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಾದ ಯೋಗ ಕರಾಟೆ ಸಮೂಹ ನೃತ್ಯ ಸಮೂಹ ಸಂಗೀತ ಚಿತ್ರಕಲೆ ಜೇಡಿ ಮಣ್ಣಿನ ಕಲೆಯನ್ನು ಈ ಬೇಸಿಗೆ ಶಿಬಿರದಲ್ಲಿ ಕಲಿತುಕೊಳ್ಳಬೇಕೆಂದು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಶೇಖರಗೌಡ ಜಿ ರಾಮತ್ನಾಳ್ ಮಕ್ಕಳಿಗೆ ಹೇಳಿದರು.

ಅವರು ಸೋಮವಾರ ಕೊಪ್ಪಳದ ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ ರಾಜ್ಯ ಬಾಲ ಭವನ ಸೊಸೈಟಿ, ಬೆಂಗಳೂರು, ಜಿಲ್ಲಾ ಪಂಚಾಯತ್ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಜಿಲ್ಲಾ ಬಾಲ ಭವನ ಸಮಿತಿ ಕೊಪ್ಪಳ ಇವರ ಸಹಯೋಗದಲ್ಲಿ ಹಮ್ಮಿಕೊಳ್ಳಲಾದ 2025–26 ಸಾಲಿನ ಬೇಸಿಗೆ ಶಿಬಿರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಕೊಪ್ಪಳ ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷ ಪ್ರಕಾಶ್ ಕಡಗದ ಅವರು ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿ, ಮಕ್ಕಳು ಶಿಬಿರದಲ್ಲಿ ಹೆಚ್ಚು ಹೆಚ್ಚು ಭಾಗವಹಿಸಿ ಬೇಸಿಗೆ ಶಿಬಿರದಲ್ಲಿ ಇದ್ದಂತಹ ಚಟುವಟಿಕೆಗಳಲ್ಲಿ ಭಾಗವಹಿಸಿ ಆಸಕ್ತಿಯಿಂದ ಕಲಿತು ಪ್ರದರ್ಶನ ಮಾಡಬೇಕು ಎಂದು ಹೇಳಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರು ಹಾಗೂ ಬಾಲ ಭವನ ಕಾರ್ಯದರ್ಶಿ ಪರಶುರಾಮವಾಯ್‌ಶೇಟ್ಟೆಪ್ಪನವರಅವರುಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಒಳ್ಳೆಯ ಶಿಕ್ಷಣವನ್ನು ಕಲಿತು ದೊಡ್ಡ ದೊಡ್ಡ ಹುದ್ದೆಗಳನ್ನು ಪಡೆದುಕೊಳ್ಳಬೇಕೆಂದು ಮಕ್ಕಳಿಗೆ ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ಜಿಲ್ಲಾ ನಿರೂಪಣಾಧಿಕಾರಿಗಳು ಗಂಗಪ್ಪ, ಕೊಪ್ಪಳ ಶಿಶು ಅಭಿವೃದ್ಧಿ ಯೋಜನಾಧಿಕಾರಿ ರೋಹಿಣಿ ಕೊಟಗಾರ, ಯಲಬುರ್ಗಾ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಬೆಟ್ಟದೇಶ ಮಾಳೆಕೊಪ್ಪ ,ಗಂಗಾವತಿ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಜಯಶ್ರೀ ಆರ್, ಕುಷ್ಟಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಯಲ್ಲಮ್ಮ ಹಂಡಿ, ಕನಕಗಿರಿ ಶಿಶು ಅಭಿವೃದ್ಧಿ ಯೋಜನಾಧಿಕಾರಿ ವೀರುಪಾಕ್ಷಿ, ಉತ್ಕರ್ಷ ಸಂಯೋಜಕರು ಪುನೀತ್ ರಾಜ ಸೇರಿದಂತೆ ಸಂಪನ್ಮೂಲ ವ್ಯಕ್ತಿಗಳು ಹಾಗೂ ವಿವಿಧ ಶಾಲೆ ಮತ್ತು ಸರಕಾರಿ ಬಾಲಮಂದಿರದ ಮಕ್ಕಳು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

# ಮದಕ ವಸ್ತುಗಳ ತಡೆಗಟ್ಟಲು ಕೊಪ್ಪಳ ಜಿಲ್ಲಾಡಳಿತದಿಂದ ಸಹಾಯವಾಣಿ ಕೇಂದ್ರ ಸ್ಥಾಪನೆ

**ಕೊಪ್ಪಳ :** ಜಿಲ್ಲೆಯಲ್ಲಿ ಮದಕ ವಸ್ತುಗಳ ತಡೆಗಟ್ಟಲು ಕೊಪ್ಪಳ ಜಿಲ್ಲಾಡಳಿತ ವತಿಯಿಂದ ಸಹಾಯವಾಣಿ ಕೇಂದ್ರ ಸ್ಥಾಪನೆ ಮಾಡಲಾಗಿದೆ ಎಂದು ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ ಅವರು ತಿಳಿಸಿದ್ದಾರೆ.

ಕೊಪ್ಪಳ ಜಿಲ್ಲೆಯಲ್ಲಿ ಮಾದಕ ವಸ್ತುಗಳ ಉತ್ಪನ್ನ, ಸಾಗಾಟ, ಸಂಗ್ರಹ, ಮಾರಾಟ ಮತ್ತು ಬಳಕೆಯನ್ನು ತಡೆಗಟ್ಟಲು ಆರೋಗ್ಯ, ಪೊಲೀಸ್, ಅಗ್ನಿಶಾಮಕ, ಅರಣ್ಯ, ಅಬಕಾರಿ, ಪ್ರವಾಸೋದ್ಯಮ, ಪುರಾತತ್ವ ಇಲಾಖೆಯ ಅಧಿಕಾರಿ, ಸಿಬ್ಬಂದಿಗಳನ್ನೊಳಗೊಂಡಂತೆ ಕೊಪ್ಪಳ ಜಿಲ್ಲಾಡಳಿತ ಭವನದಲ್ಲಿ ಸಹಾಯವಾಣಿ ಕೇಂದ್ರ ಸಂಖ್ಯೆ: 08539–225311 ನ್ನು ಆರಂಭಿಸಲಾಗಿದೆ.

ಈ ಸಹಾಯವಾಣಿಯು ಪ್ರತಿದಿನ ಬೆಳಿಗ್ಗೆ 8 ಗಂಟೆಯಿಂದ ರಾತ್ರಿ 8 ಗಂಟೆಯವರೆಗೆ ಕಾರ್ಯನಿರ್ವಹಿಸಲಿದ್ದು, ಗಾಂಜಾ ಹಾಗೂ ಮಾದಕ ವಸ್ತುಗಳ ಬಳಕೆ, ಸಂಗ್ರಹ ಹಾಗೂ ಮಾರಾಟ ಮಾಡುತ್ತಿರುವುದನ್ನು ತಡೆಯಲು ಈ ಸಹಾಯವಾಣಿಗೆ ಕರೆ ಮಾಡಿ ಮಾಹಿತಿ ನೀಡಲು ಮತ್ತು ಈ ವಿಷಯದ ಬಗ್ಗೆ ಮಾಹಿತಿ ಬೇಕಾದಲ್ಲಿ ಸಹಾಯವಾಣಿ ಮೂಲಕ ಪಡೆಯಬಹುದಾಗಿರುತ್ತದೆ ಎಂದು ಪ್ರಕಟಣೆ ತಿಳಿಸಿದೆ.



# ಉತ್ತಮ ಮಳೆ

**ರಬಕವಿ–ಬನಹಟ್ಟಿ :** ತಾಲೂಕಿನ ಸುತ್ತಲೂ ಮಂಗಳವಾರ ಸಂಜೆ ಒಂದು ಗಂಟೆಗಳ ಕಾಲ ಉತ್ತಮ ಮಳೆಯಾಗಿದೆ.

ಸಂಜೆ ಆರು ಗಂಟೆ ಸುಮಾರಿಗೆ ಗುಡುಗು, ಸಿಡಿಲಿನಾರ್ಭಟದೊಂದಿಗೆ ಶುರುವಾದ ಮಳೆ ಒಂದು ಗಂಟೆಗೂ ಅಧಿಕ ಕಾಲ ಸುರಿಯಿತು.

ಕೆಲ ದಿನಗಳಿಂದ ಬಿಸಿಲಿನ ತಾಪಕ್ಕೆ ಹೈರಾಣಾಗಿದ್ದ ಜನತೆಗೆ ಮಂಗಳವಾರ ತಂಪು ವಾತಾವರಣ ಸೃಷ್ಟಿಯಾಗಿತ್ತು.

# ಮಾಜಿ ಲೋಕಾಯುಕ್ತ ಸಂತೋಷ್ ಹೆಗ್ಡೆ ಸನ್ಮಾನ



**ಜಮಖಂಡಿ :** ಇತ್ತೀಚೆಗೆ ಇಲ್ಲಿಗೆ ಭೇಟಿ ನೀಡಿದ್ದ ಸುಪ್ರಿಮ್ ಕೋರ್ಟಿನ ನಿವೃತ್ತ ನ್ಯಾಯಮೂರ್ತಿ ಮತ್ತು ಕರ್ನಾಟಕದ ಮಾಜಿ ಲೋಕಾಯುಕ್ತರಾಗಿದ್ದ ಸಂತೋಷ ಹೆಗ್ಡೆ ಅವರನ್ನು ಜಮಖಂಡಿ ತಾಲೂಕು ರಾಜ್ಯಶಾಸ್ತ್ರ ಪ್ರಾಧ್ಯಾಪಕರ ಒಕ್ಕೂಟದ ವತಿಯಿಂದ ಹಾರ್ದಿಕವಾಗಿ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಒಕ್ಕೂಟದ ಅಧ್ಯಕ್ಷೆ ಶ್ರೀಮತಿ ಸುನಂದಾ ಎಸ್. ಶಿರೂರ ಮತ್ತು ಒಕ್ಕೂಟದ ಸದಸ್ಯರು ಪಾಲ್ಗೊಂಡಿದ್ದರು.

# ಅವೈಜ್ಞಾನಿಕ ಚರಂಡಿ ವಿದ್ಯಾನಗರ ನಿವಾಸಿಗಳ ಗೋಳು



**ಮಹಾಲಿಂಗಪುರ :** ಪಟ್ಟಣದ ಆರನೇ ವಾರ್ಡಿನ ವಿದ್ಯಾನಗರ ಬಡಾವಣೆಯಲ್ಲಿನ ಎಂಟನೇ ಕ್ರಾಸ್ ನಲ್ಲಿ ಅವೈಜ್ಞಾನಿಕ ಚರಂಡಿ ನಿರ್ಮಾಣದಿಂದಾಗಿ ಚರಂಡಿ ನೀರು ಸರಾಗವಾಗಿ ಹರಿದು ಹೋಗದೇ ಅಲ್ಲಿನ ನಿವಾಸಿಗಳು ನಿತ್ಯ ಗೋಳಾಡುವಂತಾಗಿದೆ.

ಸಾಯಿನಾಥ ಉಪ್ಪಾರ, ವಿನಯ ಹೆಗ್ಗಳಗಿ, ಕಿಶೋರ ಹಂಚಾಟೆ, ದೀರು ಕುಲಕರ್ಣಿ ಸೇರಿದಂತೆ ಅಲ್ಲಿನ ನಿವಾಸಿಗಳು ಗುತ್ತಿಗೆದಾರ ಭಗವಂತ ಬಂಡಿವಡ್ಡರ ಅವರು ಚರಂಡಿ ನಿರ್ಮಾಣದ ವೇಳೆಯೇ ಅವೈಜ್ಞಾನಿಕ ಚರಂಡಿ ನಿರ್ಮಿಸಿದ್ದರಿಂದ ನೀರು ಹರಿಯದೇ ಕೊಳಚೆ ನೀರು ನಿಂತು ಗಬ್ಬೆದ್ದು ನಾರುತ್ತಿದೆ. ಈ ಕುರಿತು ಹಲವು ಬಾರಿ ಪುರಸಭೆ ಅಧಿಕಾರಿಗಳ ಗಮನಕ್ಕೆ ತಂದಿದ್ದರೂ ಪ್ರಯೋಜನವಾಗಿಲ್ಲ ಎಂದು ಪುರಸಭೆ ಅಧಿಕಾರಿಗಳು ಮತ್ತು ಗುತ್ತಿಗೆದಾರರ ವಿರುದ್ದ ಆಕ್ರೋಶ ವ್ಯಕ್ತಪಡಿಸಿದರು.

ಈ ಕುರಿತು ಪುರಸಭೆ ಮುಖ್ಯಾಧಿಕಾರಿ ಈರಣ್ಣ ದಡ್ಡಿ ಪತ್ರಿಕೆಯೊಂದಿಗೆ ಮಾತನಾಡಿ ಪುರಸಭೆಯ ಅಭಿಯಂತರರು ಮತ್ತು ಗುತ್ತಿಗೆದಾರರನ್ನು ಸ್ಥಳಕ್ಕೆ ಕಳಿಸಿ, ಅವೈಜ್ಞಾನಿಕ ಚರಂಡಿಯಿಂದ ವಿದ್ಯಾನಗರ ನಿವಾಸಿಗಳಿಗಾಗುತ್ತಿರುವ ಸಮಸ್ಯೆಯನ್ನು ಶೀಘ್ರ ಬಗೆ ಹರಿಸಲು ಪ್ರಯತ್ನಿಸಲಾಗುವದು ಎಂದು ತಿಳಿಸಿದ್ದಾರೆ.

# ಜಾಗತಿಕ ಮಟ್ಟದಲ್ಲಿ ಸ್ಪರ್ಧೆಯನ್ನು ಎದುರಿಸಬೇಕಾಗಿದೆ



**ರಬಕವಿ–ಬನಹಟ್ಟಿ:** ವಿದ್ಯಾರ್ಥಿಗಳು ಮಾತೃ ಭಾಷೆಯಲ್ಲಿಶಿಕ್ಷಣಪಡೆದುಕೊಂಡರೆಉತ್ತಮ ಸಾಧನೆ ಮಾಡಬಲ್ಲರು. ಇಂದಿನ ದಿನಗಳಲ್ಲಿ ನಾವುಬದಲಾವಣೆಗೆಹೊಂದಿಕೊಳ್ಳುವುದರ ಜೊತೆಗೆ ಜಾಗತಿಕ ಮಟ್ಟದಲ್ಲಿ ಸ್ಪರ್ಧೆಯನ್ನು ಎದುರಿಸಬೇಕಾಗಿದೆ. ಆ ದಿಶೆಯಲ್ಲಿ ನಾವು ಜ್ಞಾನವನ್ನು ಪಡೆದುಕೊಳ್ಳಬೇಕು ಎಂದು ಜನತಾ ಶಿಕ್ಷಣ ಸಂಘದ ಆಡಳಿತ ಮಂಡಳಿಯ ಸದಸ್ಯ ಡಾ. ಪಂಡಿತ ಪಟ್ಟಣ ತಿಳಿಸಿದರು.

ಅವರು ಸೋಮವಾರ ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿದರು. ಸಂಘದ ಗೌರವ ಕಾರ್ಯದರ್ಶಿ ಶಂಕರ ಸೋರಗಾಂವಿ ಮಾತನಾಡಿ, ವಿದ್ಯಾರ್ಥಿಗಳು ತಾವು ಕಲಿತ ಶಾಲೆ ಮತ್ತು ಶಿಕ್ಷಕರ ಮೇಲೆ ವಿಶ್ವಾಸವನ್ನು ಹೊಂದಿರಬೇಕು.

ಪ್ರತಿಭಾವಂತ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದರು.

ರಾಜ್ಯಕ್ಕೆ ತೃತೀಯ, ಜಿಲ್ಲೆಗೆ ದ್ವಿತಿಯ ತಾಲ್ಲೂಕಿಗೆ ಪ್ರಥಮ ಸ್ಥಾನ ಪಡೆದುಕೊಂಡ ಲಕ್ಷ್ಮೀ ಹೆರಕಲ್, ರಾಜ್ಯಕ್ಕೆ ನಾಲ್ಕನೆಯ ಸ್ಥಾನ, ಜಿಲ್ಲೆಗೆ ಮೂರನೆ, ತಾಲ್ಲೂಕಿಗೆ ದ್ವಿತೀಯ ಸ್ಥಾನ ಪಡೆದ ಅನನ್ಯಾ ನಂದ್ಯಾಳ ಮತ್ತು ಬಸವರಾಜ ಧುಪದಾಳ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಸಂಘದ ಸದಸ್ಯರಾದ ಭೀಮಸಿ ಮಗದುಮ್, ಎಂ. ಜಿ. ಕೆರೂರ ಮತ್ತು ಉಪ ಪ್ರಾಚಾರ್ಯೆ ಎನ್. ಎಸ್. ಕಂಕಣಮೇಲಿ ಮಾತನಾಡಿದರು.

ಆಡಳಿತ ಮಂಡಳಿಯ ನೂತನ ಸದಸ್ಯರನ್ನು ಸನ್ಮಾನಿಸಲಾಯಿತು.

ಸಂಘದ ಅಧ್ಯಕ್ಷ ಸುಭಾಸ ಭದ್ರನವರ, ಉಪಾಧ್ಯಕ್ಷ ಬಸವರಾಜ ಭದ್ರನವರ, ಕಾರ್ಯಾಧ್ಯಕ್ಷ ಬಸವಂತ ಜಾಡಗೌಡ, ಶಿಕ್ಷಕರಾದ ರಾಜು ಉಕ್ಕಲಿ, ಎಸ್. ಎಂ. ತೇಲಿ, ಬಿ. ಜೆ. ಜೋರಾಪುರ, ಎಂ.ಬಿ.ಶೆಟ್ಟಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಜೂನ್ ತಿಂಗಳಿನಲ್ಲಿ ಕಸಾಪದಿಂದ ಪ್ರತಿಭಾ ಪುರಸ್ಕಾರ

**ರಬಕವಿ–ಬನಹಟ್ಟಿ :** ಪ್ರತಿ ವರ್ಷದಂತೆ ಈ ವರ್ಷವೂ ಜೂನ್ ತಿಂಗಳ ಮೊದಲ ವಾರದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾ ಘಟಕ ಬಾಗಲಕೋಟೆ ಹಾಗೂ ಕರ್ನಾಟಕ ಜಾನಪದ ಪರಿಷತ್ತು ಜಿಲ್ಲಾ ಘಟಕ ಬಾಗಲಕೋಟೆ ಇವರ ಸಂಯುಕ್ತಾಶ್ರಯದಲ್ಲಿ ಬಾಗಲಕೋಟೆ ಜಿಲ್ಲೆಯ ಸಾಹಿತಿಗಳು, ಕಲಾವಿದರು, ಪತ್ರಕರ್ತರು,

ಸಂಘಟಕರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಹಮ್ಮಿಕೊಳ್ಳಲಾಗುವುದೆಂದು ಜಿಲ್ಲಾ ಕಸಾಪ ಅಧ್ಯಕ್ಷ ಶಿವಾನಂದ ಶೆಲ್ಲಿಕೇರಿ ಹೇಳಿದರು.

ಪುಸ್ತಕಾವಲೋಕನ– 41 ಕಾರ್ಯಕ್ರಮಕ್ಕೆ ರಬಕವಿಗೆ ಆಗಮಿಸಿದ್ದ ಸಂದರ್ಭದಲ್ಲಿ ಈ ವಿಷಯ ತಿಳಿಸಿದ ಅವರು ಎಸ್.ಎಸ್.ಎಲ್.ಸಿ. ಯಲ್ಲಿ ಪ್ರತಿಶತ 80 ರಷ್ಟು ಹಾಗೂ ಪಿಯುಸಿಯಲ್ಲಿ ಪ್ರತಿಶತ 70 ರಷ್ಟು ಸಾಧನೆಗೈದ ಮಕ್ಕಳು ಆಯಾ ತಾಲೂಕಾ ಅಧ್ಯಕ್ಷರಿಗೆ ಮಾಹಿತಿ ಒದಗಿಸಬೇಕು.

ರಬಕವಿ–ಬನಹಟ್ಟಿ ತಾಲೂಕಾ ಕಸಾಪ ಅಧ್ಯಕ್ಷರು ಮ. ಕೃ. ಮೇಗಾಡಿ, ಬಾಗಲಕೋಟೆ ಪಾಂಡುರಂಗ ಸಣ್ಣಪ್ಪನವರ, ಮುಧೋಳ ಆನಂದ ಪೂಜಾರಿ, ಹುನಗುಂದ ಮಲ್ಲಿಕಾರ್ಜುನ ಸಜ್ಜನ, ಜಮಖಂಡಿ ಸಂತೋಷ ತಳಕೇರಿ, ಬೀಳಗಿ ಗುರುರಾಜ ಲೂತಿ, ಗುಳೇದಗುಡ್ಡ ಡಾ. ಹನಮಪ್ಪ ಘಂಟಿ, ಬಾದಾಮಿ ಬಿ. ಎಫ್. ಹೊರಕೇರಿ, ಮಹಾದೇವ ಕಂಬಾಗಿ ಕಸಾಪ ತಾಲೂಕಾ ಅಧ್ಯಕ್ಷರಿಗೆ ಮಾಹಿತಿ ನೀಡಬೇಕು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಕಸಾಪ ಅಧ್ಯಕ್ಷರ ಮೊಬೈಲ್ ಸಂಖ್ಯೆ 9731095271 ಗೆ ಸಂಪರ್ಕಿಸಲು ತಿಳಿಸಿದರು.

# ತಾಯಿಯ ಸ್ಥಾನಕ್ಕೆ ಮಿಗಿಲಾದ ಸ್ಥಾನ ಮತ್ತೊಂದಿಲ್ಲ: ನಾರನಗೌಡ ಉತ್ತಂಗಿ



**ಮಹಾಲಿಂಗಪುರ :** ಜಗತ್ತಿನಲ್ಲಿ ಕೆಟ್ಟ ಮಕ್ಕಳಿರಬಹುದೇ ಹೊರತು ಕೆಟ್ಟ ತಾಯಿ ಎಂದಿಗೂ ಇರಲಾರಳು. ಮಕ್ಕಳ ಏಳ್ಗೆ, ಅಭಿವೃದ್ಧಿಗಾಗಿ ಸರ್ವಸ್ವವನ್ನೇ ತ್ಯಾಗ ಮಾಡುವ ತಾಯಿಯ ಸ್ಥಾನಕ್ಕೆ ಮಿಗಿಲಾದ ಸ್ಥಾನ ಮತ್ತೊಂದಿಲ್ಲ. ಅಂಥ ತಾಯಿಯನ್ನು ಪೂಜಿಸಿ ಗೌರವಿಸುವ ಕಾರ್ಯ ಶ್ರೇಷ್ಠ ಎಂದು ಶಿಕ್ಷಕ ನಾರನಗೌಡ ಉತ್ತಂಗಿ ಹೇಳಿದರು.

ತಾಯಂದಿರ ದಿನದ ಪ್ರಯುಕ್ತ ಪಟ್ಟಣದ ಕುಬಸದ ಗಲ್ಲಿಯಲ್ಲಿ ವಿದ್ಯಾಶ್ರೀ ಸ್ವಸಹಾಯ ಸಂಘದ ವತಿಯಿಂದ ಹಮ್ಮಿಕೊಂಡ ಮಾತೃ ವಂದನಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು,

ನಿತ್ಯವೂ ಅಮ್ಮನ ಆಶೀರ್ವಾದ ಪಡೆದು ಹೆಜ್ಜೆ ಇಟ್ಟರೆ ಯಾವುದೇ ಕೆಲಸದಲ್ಲಿ ಸೋಲು ಇರುವುದಿಲ್ಲ ಎಂದರು.

ಬಸವಾನಂದ ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ಎಸ್. ಎಂ. ಮುಗಳಖೋಡ ಮಾತನಾಡಿ ಎಲ್ಲಿ ಸ್ತ್ರೀಯರನ್ನು ಗೌರವಿಸಲಾಗುತ್ತದೆಯೋ ಅಲ್ಲಿ ದೇವತೆಗಳು ನೆಲೆಸುತ್ತಾರೆ ಎಂಬ ಮಾತಿನಂತೆ ಇಂದು ಕುಬಸದ ಗಲ್ಲಿಯಲ್ಲಿ ತಾಯಂದಿರನ್ನು ಗೌರವಿಸಿದ್ದು ಮಾದರಿ ಕಾರ್ಯ ಎಂದರು.

ದಯಾನಂದಾಚಾರ್ಯ ಅವರ ಮಾರ್ಗದರ್ಶನದಲ್ಲಿ ಸ್ಥಳೀಯ ಬಡಾವಣೆಯನೂರಾರುಮಕ್ಕಳುತಮ್ಮತಮ್ಮ ತಾಯಂದಿರ ಪಾದಪೂಜೆ ಮಾಡಿ ಗೌರವ ಸಲ್ಲಿಸಿ ಆಶೀರ್ವಾದ ಪಡೆದರು. ತಮ್ಮ ಮಕ್ಕಳ ಭಕ್ತಿ ಭಾವ ಕಂಡ ತಾಯಂದಿರು ಮಕ್ಕಳ ಹಣೆಗೆ ಸಿಂಧೂರವಿಟ್ಟು ಹೃದಯ ತುಂಬಿ ಹರಸಿ, ಭಾರತೀಯ ಸೇನೆಯ ಆಪರೇಷನ್ ಸಿಂಧೂರಕ್ಕೆ ಗೌರವ ಸಲ್ಲಿಸಿದರು.

ಗಿರಿಮಲ್ಲಪ್ಪ ಯರಗಟ್ಟಿ, ಚಂದ್ರು ಯರಗಟ್ಟಿ, ಮಲಕಾಜಪ್ಪ ಅಂಬಿ, ಅನ್ನಪೂರ್ಣ ಯರಗಟ್ಟಿ, ಸುಬ್ಬವ್ವ ಗಲಗಲಿ, ದೀಪಾ ಹುಣಶ್ಯಾಳ, ಲಕ್ಷ್ಮೀ ಜಮಖಂಡಿ, ಸಿದ್ದಪ್ಪ ಹುಣಶ್ಯಾಳ, ಮಹಾಲಿಂಗ ಹನಗಂಡಿ, ಶೃತಿ ಯರಗಟ್ಟಿ, ರಾಜೇಶ್ವರಿ ಹನಗಂಡಿ ಸೇರಿದಂತೆ ನೂರಾರು ಮಹಿಳೆಯರು ಮಕ್ಕಳು ಭಾಗವಹಿಸಿದ್ದರು. ಬಸವಾನಂದ ಶಾಲೆಯ ಶಿಕ್ಷಕ ಸಿ. ವಿ. ಹುಣಶ್ಯಾಳ ನಿರೂಪಿಸಿ–ವಂದಿಸಿದರು.

# ಶಿವಬೋಧರಂಗ ಕ್ರೆಡಿಟ್ ಸೊಸೈಟಿಗೆ 6.40 ಕೋಟಿ ಲಾಭ

**ಮೂಡಲಗಿ :** ಮೂಡಲಗಿಯ ಶಿವಬೋಧರಂಗ ಅರ್ಬನ್ ಕೋ.ಆಪ್ ಕ್ರೆಡಿಟ್ ಸೊಸೈಟಿಯು 2025 ರ ಮಾರ್ಚ್ ಅಂತ್ಯಕ್ಕೆ ರೂ. 6.40 ಕೋಟಿ ಲಾಭವನ್ನು ಗಳಿಸಿ ಪ್ರಗತಿಪಥದಲ್ಲಿ ಸಾಗಿದೆ ಎಂದು ಅಧ್ಯಕ್ಷ ಬಸವರಾಜ ವೆಂಕಪ್ಪ ಗುಲಗಾಲಜಂಬಗಿ ತಿಳಿಸಿದರು.

ಸೊಸೈಟಿಯ ಪ್ರಗತಿಯ ಕುರಿತು ಮಂಗಳವಾರ ಕರೆದಿದ್ದ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿ ಶೇರು ಬಂಡವಾಳ 6.41 ಕೋಟಿ.

ಠೇವುಗಳು 401.62 ಕೋಟಿ. ಸಾಲಗಳು ವಿತರಿಸಿದ್ದು 245.06 ಕೋಟಿ ನಿಧಿಗಳು 30–70 ಕೋಟಿ ಗುಂತಾವಣೆಗಳು 128.54 ಕೋಟಿ ದುಡಿಯುವ ಬಂಡವಾಳ 474.01 ಕೋಟಿ ಒಟ್ಟು ವಾರ್ಷಿಕ ವಹಿವಾಟು 1585,72 ಕೋಟಿ. ಸಂಘದ ಒಟ್ಟು ಸದಸ್ಯರ ಸಂಖ್ಯೆ 16,692,

ಮಾರ್ಚ ಅಂತ್ಯಕ್ಕೆ ಸಂಘವು 6.40 ಕೋಟಿ ಲಾಭ ಗಳಿಸಿದೆ ಎಂದರು.

ಉಪಾಧ್ಯಕ್ಷ ಸುಭಾಸ ರಾಮಚಂದ್ರಪ್ಪ ಸೋನವಾಲ್ಕರ ಸೊಸೈಟಿಯು ಸಂಘವು ಒಟ್ಟು 18 ಶಾಖೆಗಳು ಹೊಂದಿದ್ದು ಎಲ್ಲ ಶಾಖೆಗಳು ಉತ್ತಮ ಪ್ರಗತಿಯಲ್ಲಿವೆ. ಇನ್ನೂ ಐದು ಶಾಖೆಗಳನ್ನು ಪ್ರಾರಂಭಿಸುವ ಬಗ್ಗೆ ನಿರ್ಧರಿಸಲಾಗಿದೆ ಎಂದರು.

ಪ್ರಧಾನ ಕಾರ್ಯದರ್ಶಿ ಸುರೇಶ ಬಾಲಪ್ಪ ನಾಶಿ ಮಾತನಾಡಿ, ಸೊಸೈಟಿಯ ಪ್ರಧಾನ ಕಛೇರಿಯು ನೂತನವಾಗಿ ನವೀಕರಣಗೊಂಡಿದ್ದು ಮೇಲಿನ ಭಾಗದಲ್ಲಿ ಸಭಾಭವನ, ಕೆಳಗಡೆ ಕಂಪ್ಯುಟರಿಕರಣಗೊಂಡ ಕಛೇರಿ,ಮೊದಲನೇಯ ಮಹಡಿಯಲ್ಲಿ ಆಡಳಿತ ಮಂಡಳಿಯ ಸಭೆ ನಡೆಸಲು ನವೀಕರಣಗೊಳಿಸಿದ ಕೊಠಡಿಗಳು ಇದ್ದು, ಸದ್ಯ 18 ಶಾಖೆಗಳಲ್ಲಿ ರಾಮದುರ್ಗ ತಾಲೂಕಿನಲ್ಲಿ ಸ್ವಂತ ಕಟ್ಟಡ ಹೊಂದಿದೆ. ಎಲ್ಲ ಶಾಖೆಗಳಿಗೂ ಸ್ವಂತ ಕಟ್ಟಡ ಹೊಂದಬೇಕು ಎಂಬ ಉದ್ದೇಶ ಇದೆ.

ಪತ್ರಿಕಾ ಗೋಷ್ಠಿಯಲ್ಲಿ ನಿರ್ದೇಶಕರಾದ ಡಾ. ಶಂಕರ ಶಿವಪ್ಪ ದಂಡಪ್ಪನವರ, ಅಶೋಕ ಮಲ್ಲಪ್ಪ ಹೊಸೂರ, ರವೀಂದ್ರ ಪಾಂಡಪ್ಪ ಸೋನವಾಲ್ಕರ, ರೇವಪ್ಪ ಕಲ್ಲಪ್ಪ ಕುರಬಗಟ್ಟಿ, ಪುಲಕೇಶಿ ರಾಮಚಂದ್ರ ಸೋನವಾಲ್ಕರ, ಶಿವಬಸು ಮಹಾಲಿಂಗಪ್ಪ ಬೂದಿಹಾಳ, ಗಂಗವ್ವ ಕೆಂಚಪ್ಪ ಸಣ್ಣಪ್ಪನವರ, ಶಾರದಾ ಬಸವರಾಜ ಗುಲಗಾಲಜಂಬಗಿ, ವಿದ್ಯಾವತಿ ರವೀಂದ್ರ ಸೋನವಾಲ್ಕರ, ಮಂಜುಳಾ ಶಿವಶಂಕರ ಬಳಗಾರ, ಹಣಮಂತ ಸತ್ಯೆಪ್ಪಾ ಸಣ್ಣಕ್ಕಿ ಉಪಸ್ಥಿತರಿದ್ದರು.

# ಕೇಂದ್ರ ಕಸಾಪ ಅಧ್ಯಕ್ಷರ ಕೈ ಬಲಪಡಿಸಲು ಜಿಲ್ಲಾಧ್ಯಕ್ಷರು ಬದ್ಧ: ಶೆಲ್ಲಿಕೇರಿ

**ರಬಕವಿ-ಬನಹಟ್ಟಿ :** ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ. ಮಹೇಶ ಜೋಶಿ ಅವರು ಹೊಸ ಹೊಸ ಆಲೋಚನೆಗಳೊಂದಿಗೆ ರಾಜ್ಯದಲ್ಲಿ ಕೇಂದ್ರ ಕಸಾಪ ಕ್ರಿಯಾಶೀಲವಾಗಿರುವಂತೆ ನೋಡಿಕೊಳ್ಳುತ್ತಿದ್ದಾರೆ. ರಾಜ್ಯದ ಎಲ್ಲ ಜಿಲ್ಲೆಗಳ ಕಸಾಪ ಅಧ್ಯಕ್ಷರು ಅವರ ಜೊತೆಗೆ ನಿರಂತರವಾಗಿ ಇದ್ದುಕೊಂಡು ಅವರ ಕೈ ಬಲಪಡಿಸುವದಿಶೆಯಲ್ಲಿಕೆಲಸಮಾಡುತ್ತಿದ್ದೇವೆ ಎಂದು ಬಾಗಲಕೋಟೆ ಜಿಲ್ಲಾ ಕಸಾಪ ಅಧ್ಯಕ್ಷ ಶಿವಾನಂದ ಶೆಲ್ಲಿಕೇರಿ ಹೇಳಿದರು.

ರಬಕವಿ ವಿದ್ಯಾನಗರದ ಜವಳಿ ಉದ್ದಿಮೆದಾರ ಮಲ್ಲೇಶಪ್ಪ ಕುಚನೂರ ಅವರ ನಿವಾಸಕ್ಕೆ ಪುಸ್ತಕಾವಲೋಕನಕಾಯ9ಕ್ರಮಕ್ಕೆಆಗಮಿಸಿದ ಸಂದರ್ಭದಲ್ಲಿ ಹಿರಿಯ ಸಾಹಿತಿಗಳು, ಪತ್ರಕರ್ತರೊಂದಿಗೆ ಸಮಾಲೋಚನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕಳೆದ ಮೂರು ವರ್ಷಗಳಲ್ಲಿ ಜಿಲ್ಲಾ ಕಸಾಪದಿಂದ ಆಗಿರುವ ಸಾಧನೆಗಳನ್ನು ವಿವರಿಸಿ ಈಗಾಗಲೇ ಬಾಗಲಕೋಟೆ ಜಿಲ್ಲೆಯಲ್ಲಿ ಮೂರು ಜಿಲ್ಲಾ ಸಮ್ಮೇಳನಗಳು, 12 ತಾಲೂಕ ಸಮ್ಮೇಳನಗಳು ನಡೆದಿವೆ. ಅದೇ ರೀತಿ ಶಿಕ್ಷಕ-ಸಾಹಿತಿಗಳ ಸಮ್ಮೇಳನ, ಬಾಗಲಕೋಟೆ-ವಿಜಯಪುರ ಅಂತರ್ ಜಿಲ್ಲಾ ಬೆಳಗಾವಿ ವಿಭಾಗ ಮಟ್ಟದ ಸಾಂಸ್ಕೃತಿಕ ಸಮ್ಮೇಳನವನ್ನು ಆಯೋಜಿಸಲಾಗಿದೆ ಎಂದರು.

ಕನ್ನಡಸಾರಸ್ವತಲೋಕಕ್ಕೆಜಿಲ್ಲೆಯಕಲೆ,ಸಾಹಿತ್ಯ, ಸಂಸ್ಕೃತಿ,ಜನಪದ,ನಾಟಕ,ಸಂಶೋಧನೆಗಳಿಗೆ ಸಂಬಂಧಿಸಿದಂತೆ 35 ಪುಸ್ತಕಗಳನ್ನು ದಾನಿಗಳ ಸಹಕಾರದೊಂದಿಗೆ ಪ್ರಕಟಿಸಲಾಗಿದೆ. ತಿಂಗಳ ಅತಿಥಿ ವಿಶೇಷ ಕಾರ್ಯಕ್ರಮ ಆಯೋಜಿಸಿ ಹಿರಿಯ ಸಾಹಿತಿಗಳ ಪರಿಚಯಾತ್ಮಕ ಹದಿಮೂರು ವೆಬಿನಾರ ಆನ್ಲೈನ್ ಕಾರ್ಯಕ್ರಮ ಮಾಡಲಾಗಿದೆ. ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಘಟಕದಿಂದ ಎಸ್.ಎಸ್.ಎಲ್.ಸಿ. ಹಾಗೂ ಪಿಯುಸಿಯಲ್ಲಿ ಪ್ರತಿಶತ ನೂರಕ್ಕೆ ನೂರರಷ್ಟು ಕನ್ನಡ ವಿಷಯದಲ್ಲಿ ಅಂಕ ಪಡೆದ ಕಲಾವಿದರು, ಸಾಹಿತಿಗಳು, ಪತ್ರಕರ್ತರು, ಸಂಘ-ಸಂಸ್ಥೆಗಳ ಪದಾಧಿಕಾರಿಗಳ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಆಯೋಜಿಸಲಾಗಿದೆ.

ವಿಶ್ವ ವಿದ್ಯಾಲಯಗಳು, ಅಕ್ಯಾಡೆಮಿಗಳ ಸಹಯೋಗದೊಂದಿಗೆ ಹಲವಾರು ಶಿಬಿರಗಳನ್ನು ಜಿಲ್ಲೆಯ ವಿವಿಧೆಡೆ ಆಯೋಜಿಸಲಾಗಿದೆಯೆಂದು ವಿವರಿಸಿದರು.

ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾ ಘಟಕ, ತಾಲೂಕ ಘಟಕ, ಹೋಬಳಿ ಘಟಕಗಳ ಪದಾಧಿಕಾರಿಗಳು ಸೇರಿಕೊಂಡು ಒಟ್ಟು 780 ಜನ ಕನ್ನಡ ಕಟ್ಟುವ ಕೆಲಸ ಮಾಡುತ್ತಿದ್ದೇವೆ. ಜಿಲ್ಲೆಯಲ್ಲಿ ಸಾರ್ಥಕ ಕಾರ್ಯ ಕನ್ನಡ ಸಾಹಿತ್ಯ ಪರಿಷತ್ತಿನಿಂದ ನಡೆದಿದೆ ಎಂದರು. ಜಿಲ್ಲಾ, ತಾಲೂಕು, ಹೋಬಳಿ ಮಟ್ಟದಲ್ಲಿ ಇನ್ನೂ ವಿಶಿಷ್ಟ, ವಿಧಾಯಕ, ವೈವಿಧ್ಯಮಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು. ಆದರೆ ಸರಕಾರದಿಂದ ಬರಬೇಕಾಗಿರುವ ಧನಸಹಾಯ ನಮಗೆ ಬರುತ್ತಿಲ್ಲ ಎಂದು ತಿಳಿಸಿದರು.

2026 ನವೆಂಬರ್ವರೆಗೆ ನಮ್ಮ ಅವಧಿಯಲ್ಲಿ ಹಿರಿಯರ ಮಾರ್ಗದರ್ಶನದಲ್ಲಿ ಇನ್ನೂ ಅನೇಕ ವಿಶೇಷವಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು. ಅದಕ್ಕೆ ತಮ್ಮ ಸಲಹೆ-ಸೂಚನೆ, ಮಾರ್ಗದರ್ಶನ ಸದಾ ಕಾಲ ಕನ್ನಡ ಸಾಹಿತ್ಯ ಪರಿಷತ್ತಿಗೆ ಬೇಕು ಎಂದರು.

ಮಹಾಲಿಂಗಪುರದ ಹಿರಿಯ ಸಾಹಿತಿ ಗುರುರಾಜ್ ಖಾಸನೀಸ ಅವರು ಮಾತನಾಡಿ, ಪದ್ಮಶ್ರೀ ಪುರಸ್ಕೃತರಾದ ಮಹಾಲಿಂಗಪುರದ ಇಬ್ರಾಹಿಂ ಸುತಾರ್ ಅವರ ವ್ಯಕ್ತಿತ್ವ, ಜ್ಞಾನ, ಅಧ್ಯಯನ, ಸಾಧನೆ ಕುರಿತು ಅವರ ಜನ್ಮ ದಿನೋತ್ಸವ ಕಾರ್ಯಕ್ರಮ ಕನ್ನಡ ಸಾಹಿತ್ಯ ಪರಿಷತ್ತಿನಿಂದ ನಡೆಯಬೇಕು ಎಂದರು.

ನಿವೃತ್ತ ಅರ್ಥಶಾಸ್ತ್ರ ಉಪನ್ಯಾಸಕರಾದ ಎಂ. ಎಸ್. ಬದಾಮಿ ಅವರು ಮಾತನಾಡಿ ರಬಕವಿ-ಬನಹಟ್ಟಿಯಲ್ಲಿ ಸಾಹಿತ್ಯ ಭವನ ನಿರ್ಮಾಣ ಮಾಡಬೇಕಾಗಿದೆ. ಆದ್ದರಿಂದ ಜಿಲ್ಲಾ ಘಟಕವು ರಾಜ್ಯ ಘಟಕದ ಮೇಲೆ ಒತ್ತಡ ತಂದು ಸರ್ಕಾರದಿಂದ ಉಚಿತವಾಗಿ ನಿವೇಶನ ದೊರೆಯುವಂತೆ ಮಾಡಬೇಕು. ವಿಧಾನಸಭಾ ಅಧಿವೇಶನದಲ್ಲಿ ಈ ಕುರಿತು ಚರ್ಚೆಯಾಗಿ ಠರಾವು ಪಾಸು ಮಾಡಿಸಿ ಉಚಿತವಾಗಿ ಜಾಗೆ ನೀಡುವಂತೆ ಜಿಲ್ಲೆ ಮತ್ತು ರಾಜ್ಯಾಧ್ಯಕ್ಷರು ಒತ್ತಾಯಿಸಬೇಕು ಎಂದರು. ಹಿರಿಯ ಕವಿ ಈಶ್ವರ ಸಣಕಲ್ಲ ಅವರ ಎರಡು ಕಾವ್ಯ ಕೃತಿಗಳ ಮರು ಮುದ್ರಣವಾಗಬೇಕು. ಒಂದು ನೀವು ಮಾಡಿ, ಇನ್ನೊಂದು ನಾವು ಮಾಡುತ್ತೇವೆ. ಜಿಲ್ಲಾ ಸಮ್ಮೇಳನಗಳಿಗೆ ಐದು ಲಕ್ಷ ರೂಪಾಯಿ, ತಾಲೂಕ ಸಮ್ಮೇಳನಗಳಿಗೆ ಒಂದು ಲಕ್ಷ ಕಡ್ಡಾಯವಾಗಿ ನೀಡಬೇಕೆಂದು ಸರ್ಕಾರದ ಮೇಲೆ ಒತ್ತಡ ಹೇರಬೇಕು.

ರಬಕವಿಯಲ್ಲಿ ಜಿಲ್ಲಾ ಸಾಹಿತ್ಯ ಸಮ್ಮೇಳನ ಮಾಡಬೇಕು ಎಂದರು.

ಶಿವಾನಂದ ಶೆಲ್ಲಿಕೇರಿ ಮಾತನಾಡಿ ಸಾಹಿತ್ಯ ಭವನಗಳ ನಿರ್ಮಾಣಕ್ಕೆ ಕೇಂದ್ರದಿಂದ ದುಡ್ಡು ಬಂದಿಲ್ಲ. ಸ್ಥಳೀಯ ಶಾಸಕರ, ಸಂಸದರ ನಿಧಿಯಿಂದ ವಿವಿಧೆಡೆ ಭವನ ನಿರ್ಮಾಣ ಮಾಡಲಾಗಿದೆ. ಇಲಕಲ್ಲ, ರಬಕವಿ-ಬನಹಟ್ಟಿ, ಗುಳೇದಗುಡ್ಡ, ಜಮಖಂಡಿ ತಾಲೂಕುಗಳಲ್ಲಿ ಸಾಹಿತ್ಯ ಭವನ ನಿರ್ಮಾಣಕ್ಕೆ ಭೂಮಿ ಅಥವಾ ನಿವೇಶನದೊರೆಯುವುದುತೊಂದರೆಆಗುತ್ತಿದ್ದು, ಆಡಳಿತಾತ್ಮಕವಾಗಿ ತಾಂತ್ರಿಕ ತೊಂದರೆಗಳಿವೆ. ಆದರೂ ರಾಜ್ಯಾಧ್ಯಕ್ಷರ ಮೂಲಕ, ಶಾಸಕರ ಮೂಲಕ ಮುಖ್ಯಮಂತ್ರಿಗಳಿಗೆ ಒತ್ತಾಯ ಮಾಡಲಾಗುವುದು. ಈ ತಾಲೂಕುಗಳಲ್ಲಿಯೂ ಭವನ ನಿರ್ಮಾಣವಾಗಬೇಕೆಂಬ ಬಯಕೆ ಇದೆ ಎಂದರು. ಪುಸ್ತಕಾವಲೋಕನ-50 ಕಾರ್ಯಕ್ರಮಕ್ಕೆ ರಾಜ್ಯಾಧ್ಯಕ್ಷರನ್ನು ಆಹ್ವಾನಿಸಲಾಗುವುದು ಎಂದು ತಿಳಿಸಿದರು. ಈಶ್ವರ ಸಣಕಲ್ಲ ಪ್ರತಿಷ್ಠಾನ ಸ್ಥಾಪಿಸಬೇಕಾಗಿದೆ. ಸಾಹಿತ್ಯೇತರ ಕಾರಣಗಳಿಂದ ಅದು ಉಳಿದಿದೆ ಎಂದು ಎಂ. ಎಸ್. ಬದಾಮಿಯವರು ಜಿಲ್ಲಾಧ್ಯಕ್ಷರ ಗಮನ ಸೆಳೆದರು.

ಸ್ಥಳೀಯರ ಸಮಿತಿ ಮಾಡಿ ಈಶ್ವರ ಸಣಕಲ್ಲ ಅವರ ಹೆಸರಿನಲ್ಲಿ ಪ್ರತಿಷ್ಠಾನವಾಗಬೇಕು. ಹಾಲಿ ಶಾಸಕರಾದ ಸಿದ್ದು ಸವದಿ, ಮಾಜಿ ಶಾಸಕರು, ಸಚಿವೆಯಾಗಿದ್ದ, ಈಗಿನ ವಿಧಾನ ಪರಿಷತ್ ಸದಸ್ಯೆಯಾದ ಶ್ರೀಮತಿ ಡಾ. ಉಮಾಶ್ರೀ ಅವರು ಮನಸ್ಸು ಮಾಡಿದರೆ, ಪ್ರಯತ್ನ ಪಟ್ಟರೆ ಖಂಡಿತ ಈಶ್ವರ ಸಣಕಲ್ಲ ಪ್ರತಿಷ್ಠಾನವಾಗುವುದರಲ್ಲಿ ಸಂದೇಹವಿಲ್ಲವೆಂದು ಶೆಲ್ಲಿಕೇರಿ ತಿಳಿಸಿದರು.

ಸಾಹಿತಿ ಶಿವಾನಂದ ಬಾಗಲಕೋಟಮಠ, ಶಿವಾನಂದ ದಾಶಾಳ ಮಾತನಾಡಿ ಈಶ್ವರ ಸಣಕಲ್ಲ ಅವರ ಕೃತಿಗಳು ನಾಗನೂರ ರುದ್ರಾಕ್ಷಿ ಮಠದಲ್ಲಿ, ಮಲಾಬಾದ ಗ್ರಾಮದ ಬಿ.ಎಲ್.ಪಾಟೀಲ ಅವರ ದೇವದಾಸಿ ವಿಮೋಚನೆಯ ಗ್ರಂಥಾಲಯದಲ್ಲಿ ಸಿಗುತ್ತವೆ. ಅವುಗಳನ್ನು ಪಡೆದು ಮರುಮುದ್ರಣ ಕಾರ್ಯ ಮಾಡಬೇಕಿದೆ. ಐವತ್ತು ಸಾವಿರ ರೂ.ಗಳ ಕಸಾಪ ದತ್ತಿನಿಧಿ ಸ್ಥಾಪಿಸಿ ಪ್ರತಿ ವರ್ಷವೂ ದತ್ತಿನಿಧಿ ಕಾರ್ಯಕ್ರಮ ನಡೆಸಬೇಕು ಎಂದರು. ರಬಕವಿ-ಬನಹಟ್ಟಿ ತಾಲೂಕಿನಲ್ಲಿ ಜಿಲ್ಲಾ ಹಾಗೂ ತಾಲೂಕ ಸಮ್ಮೇಳನ ನಡೆಸಬೇಕು. ಜಿಲ್ಲೆಯ ವಿವಿಧೆಡೆ ಕಥಾ ಕಮ್ಮಟ, ಕಾವ್ಯ ಕಮ್ಮಟ, ಕಾದಂಬರಿ ಕಮ್ಮಟ ನಡೆಸಿ, ಹೊಸ ಬರಹಗಾರರಿಗೆ, ಯುವಕರಿಗೆ ಅವಕಾಶ ನೀಡಬೇಕೆಂದು ತಿಳಿಸಿದರು.

ಕುವೆಂಪುಅಧ್ಯಯನಶಿಬಿರಪ್ರೌಢಶಾಲಾಶಿಕ್ಷಕರಿಗೆ ರಸಗ್ರಹಣ ಕಾರ್ಯಕ್ರಮ ಆಯೋಜಿಸಲಾಗಿದೆ. ವಿಶೇಷ ಕಾರ್ಯಗಾರ ಕಥೆ, ಕಾವ್ಯ, ಕಲೆ, ಸಾಂಸ್ಕೃತಿಕ ಕಮ್ಮಟ ಮಾಡಲಾಗುತ್ತದೆ. ಜಿಲ್ಲೆಯಲ್ಲಿ ವಿಶಿಷ್ಟ, ವಿಧಾಯಕ, ವೈವಿಧ್ಯಮಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ ದತ್ತಿನಿಧಿ ಮಾಡುವುದು ಸೂಕ್ತವಾಗಿದೆ ಎಂದು ಶೆಲ್ಲಿಕೇರಿ ಹೇಳಿದರು.

ತಾಲೂಕಾ ಕಸಾಪ ಅಧ್ಯಕ್ಷ ಮ. ಕೃ. ಮೇಗಾಡಿ ಸ್ವಾಗತಿಸಿ, ತಾಲೂಕಿನಾದ್ಯಂತ ಪ್ರತಿ ತಿಂಗಳು ಪುಸ್ತಕವಲೋಕನ 41 ತಿಂಗಳಿನಿಂದ ನಡೆದು ಸಾಹಿತಿಗಳ, ಸಾಹಿತ್ಯಾಸಕ್ತರ ಮೆಚ್ಚುಗೆಗೆ ಪಾತ್ರವಾಗಿದೆ.

ದತ್ತಿನಿಧಿ, ಶಾಲೆಯೆಡೆಗೆ ಸಾಹಿತ್ಯದ ನಡಿಗೆ, ಗೀತ ಗಾಯನ, ಪ್ರತಿಭಾ ಪುರಸ್ಕಾರ, ಯುಗಾದಿ, ಶ್ರಾವಣ ಕವಿಗೋಷ್ಠಿಗಳ ನಡೆದಿರುವ ಮೂರು ವರ್ಷಗಳ ಸಾಧನೆಗಳನ್ನು ವಿವರಿಸಿದರು. ಗೌರವ ಕಾರ್ಯದರ್ಶಿ ಶ್ರೀಶೈಲ ಬುರ್ಲಿ ಸೊಗಸಾಗಿ ನಿರೂಪಿಸಿದರು.

ಜಿ. ಎಸ್. ವಡಗಾಂವಿ, ಮಹಾದೇವ ಕವಿಶೆಟ್ಟಿ, ಮೃತ್ಯುಂಜಯ ರಾಮದುರ್ಗ, ಯಶವಂತ ವಾಜಂತ್ರಿ, ಬಸವರಾಜ ಮೇಟಿ, ವಿಶ್ವಜ ಕಾಡದೇವರ, ಡಾ. ಚಂದ್ರಕಾಂತ ಹೊಸೂರ, ಮಲ್ಲೇಶಪ್ಪ ಕುಚನೂರ, ಮಹಾಶಾಂತ ಶೆಟ್ಟಿ, ಡಿ. ಬಿ.ಜಾಯಗೊಂಡ,ಈರಣ್ಣ,ಶರತ್ಚಂದ್ರಜಂಬಗಿ, ಎನ್. ಎನ್. ಬೇವೂರ, ಡಾ. ರವಿ ಜಮಖಂಡಿ, ಅಶೋಕ ಕುಚನೂರ, ಈರಪ್ಪ ಮನ್ನಿ, ದಾನಪ್ಪ ಆಸಂಗಿ, ಡಾ. ಎಸ್. ಎಸ್. ಕುಚನೂರ ಮುಂತಾದ ಗಣ್ಯರು ಪಾಲ್ಗೊಂಡಿದ್ದರು.

## 'ಸಹಕಾರಿ ರತ್ನ' ಶಂಕರ ಗೊಬ್ಬಾಣಿ ನಿಧನ



**ಬನಹಟ್ಟಿ :** ರಾಜ್ಯ ಸರ್ಕಾರದ ಸಹಕಾರಿ ರತ್ನ ಪ್ರಶಸ್ತಿ ಪುರಸ್ಕೃತರಾದ ಶಂಕರ ಜಿ. ಗೊಬ್ಬಾಣಿ ಅವರು ತಮ್ಮ 86 ನೆಯ ವಯಸ್ಸಿನಲ್ಲಿ ವಯೋಸಹಜ ಕಾಯಿಲೆಯಿಂದ ಮೇ ತಿಂಗಳ 13 ರಂದು ಮಧ್ಯಾಹ್ನ 1-30 ಕ್ಕೆ ಅವರ ಸ್ವಗ್ರಾಮ ಜಗದಾಳದಲ್ಲಿ ನಿಧನರಾದರು.

ಅವಿಭಜಿತ ವಿಜಯಪುರ ಜಿಲ್ಲೆಯ ಸಹಕಾರಿ ಹಾಗು ರಾಜಕೀಯ ಕ್ಷೇತ್ರದಲ್ಲಿ ಸಾಕಷ್ಟು ಕೃಷಿ ಮಾಡುವ ಮೂಲಕ ತಮ್ಮದೇಯಾದ ಕೊಡುಗೆ ನೀಡಿದ್ದಾರೆ. ಎಸ್.ಡಿ.ಎಲ್.ಬಿ. ಬ್ಯಾಂಕಿನ ನಿರ್ದೇಶಕರಾಗಿ, ಜಮಖಂಡಿ ಪಿಎಲ್ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಹಾಗು ಹಾಲಿ ನಿರ್ದೇಶಕರಾಗಿ ಹಾಗು ಜಗದಾಳ ಪಿಕೆಪಿಎಸ್ನ ಮಾಜಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ.

ಮೃತರು ತಮ್ಮ ಹಿಂದೆ ಐವರು ಪುತ್ರರು ಹಾಗು ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗ ಅಗಲಿದ್ದಾರೆ. ದೇವರು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಎಂದು ಕನ್ನಡ ದಿನಪತ್ರಿಕೆ ಬಳಗದಿಂದ ಪ್ರಾರ್ಥಿಸುತ್ತೇನೆ.

## ಬಿಸನಾಳ ಬನ್ನೆಮ್ಮದೇವಿ ಜಾತ್ರಾ ಮಹೋತ್ಸವ

**ಮಹಾಲಿಂಗಪುರ :** ಸಮೀಪದ ಬಿಸನಾಳ ಗ್ರಾಮದಲ್ಲಿ ಬನ್ನೆಮ್ಮದೇವಿ ಜಾತ್ರೆಯ ಅಂಗವಾಗಿ ಸೋಮವಾರ ರಾತ್ರಿ ಅಪಾರ ಭಕ್ತರ ಮಧ್ಯೆ ಬನ್ನೆಮ್ಮದೇವಿ ರಥೋತ್ಸವ ಜರುಗಿತು.

ಜಾತ್ರೆಯನಿಮಿತ್ಯಬನ್ನೆಮ್ಮದೇವಿಮೂರ್ತಿಯನ್ನುಭವ್ಯ ರಥದಲ್ಲಿ ಕೂರಿಸಿ ಪೂಜೆ ನೆರವೇರಿಸಿ ಮಂಗಳಾರತಿ ಮಾಡಲಾಯಿತು. ಮಹಾಲಿಂಗೇಶ್ವರ ಶಿವಯೋಗಿ ರಾಜೇಂದ್ರ ಮಹಾಸ್ವಾಮಿಜಿ ರಥೋತ್ಸವಕ್ಕೆ ಚಾಲನೆ ನೀಡಿದರು. ಬನ್ನೆಮ್ಮ ದೇವಸ್ಥಾನದ ಆವರಣದಲ್ಲಿ ಸಾಗಿದ ರಥೋತ್ಸವಕ್ಕೆ ಭಕ್ತರು ಬೆಂಡು, ಬೆತ್ತಾಸು, ಬಾಳೆಹಣ್ಣು ತೂರಿ ಭಕ್ತಿಯ ಪರಾಕಾಷ್ಠೆ ಮೆರೆದರು.

ರನ್ನಬೆಳಗಲಿಯ ಸಿದ್ಧರಾಮ ಶಿವಯೋಗಿಗಳು, ಶಾಸಕ ಸಿದ್ದು ಸವದಿ, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಮಹಾಂತೇಶ ಹಿಟ್ಟಿನಮಠ ಸೇರಿದಂತೆ ಹಲವು ರಾಜಕೀಯ ಮುಖಂಡರು ಬನ್ನೆಮ್ಮದೇವಿ ದರ್ಶನ ಪಡೆದು ಜಾತ್ರಾ ಕಮಿಟಿ ಹಿರಿಯರಿಂದ ಸನ್ಮಾನ ಸ್ವೀಕರಿಸಿದರು.

ರಥೋತ್ಸವದ ಮುಂದೆ ಕಂಡ್ಯಾಳ ಬಾಸಿಂಗ, ನಂದಿಕೋಲು, ಡೊಳ್ಳು ಕುಣಿತ, ಕೋಲಾಟ, ಕರಡಿ ಮಜಲು ಸೇರಿದಂತೆ ವಿವಿಧ ವಾದ್ಯ ಮೇಳಗಳ ಪ್ರದರ್ಶನ ರಥೋತ್ಸವಕ್ಕೆ ಮೆರಗು ನೀಡಿದವು. ಜಾತ್ರೆ ಅಂಗವಾಗಿ ದೇವಸ್ಥಾನ ಮುಂದೆ ನಿರ್ಮಿಸಿದ ನೂತನ ಹಾಲಗಂಬ ಉದ್ಘಾಟಿಸಲಾಯಿತು. ಜಾತ್ರಾ ನಿಮಿತ್ಯ ನಿಮಿಷದ ಬಂಡಿ ಮತ್ತು ತೆರಬಂಡಿ ಸ್ಪರ್ಧೆಗಳು, ನಾಟಕ,

ಅನ್ನಪ್ರಸಾದ ಕಾರ್ಯಕ್ರಮಗಳು ಜರುಗಿದವು. ಬುಧವಾರ ಮುಂಜಾನೆ ಕಳಸ ಇಳಿಸುವದರೊಂದಿಗೆ ಜಾತ್ರಾ ಮಹೋತ್ಸವ ಮುಕ್ತಾಯಗೊಳ್ಳಲಿದೆ.

ಗ್ರಾಮದ ಹಿರಿಯರಾದ ಮಹಾಲಿಂಗ ನಾಯಕ, ಬಸವರಾಜ ಶಿರೋಳ,

ಪಪ್ಪು ಮರನೂರ, ಶಿವಪ್ಪ ಮೂಡಲಗಿ, ಪ್ರಕಾಶ ಚನ್ನಾಳ, ಮಹಾಲಿಂಗ ಶಿರೋಳ, ದುಂಡಪ್ಪ ಚನ್ನಾಳ, ಕೆ. ಎಸ್. ಮಲಕಾಪುರ, ಮಹಾಲಿಂಗ ಮೋಪಗಾರ, ಚನ್ನು ದೇಸಾಯಿ, ಮಾರುತಿ ತೇಜಪ್ಪಗೋಳ, ಸಿದ್ದಪ್ಪ ಉಳ್ಳಾಗಡ್ಡಿ, ಸಿ. ಆರ್. ಚನ್ನಾಳ, ಹಣಮಂತ ಮೋಪಗಾರ, ರವಿ ಸತ್ತಿಗೇರಿ, ಶ್ರೀಶೈಲ ಚನ್ನಾಳ, ಬಸವರಾಜ ಚನ್ನಾಳ ಸೇರಿದಂತೆ ಹಲವರು ಜಾತ್ರಾ ಮಹೋತ್ಸವದ ನೇತೃತ್ವ ವಹಿಸಿದ್ದರು.

## ಶಾಸಕರಿಂದ 1.37 ಕೋಟಿ ವೆಚ್ಚದ ಕಾಮಗಾರಿಗೆ ಭೂಮಿ ಪೂಜೆ




**ಜಮಖಂಡಿ :** ನಗರದ ಸರಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ಜಿಲ್ಲಾ ಪಂಚಾಯತ ವಿವೇಕ ಶಾಲಾ ಯೋಜನಾ ಅನುದಾನದಲ್ಲಿ ಅಂದಾಜು 1.37 ಕೋಟಿ ರೂ.ಗಳಲ್ಲಿ ನೂತನ ಆರು ಕೊಠಡಿಗಳ ನಿರ್ಮಾಣ ಕಾಮಗಾರಿಗೆ ಶಾಸಕ ಜಗದೀಶ ಗುಡಗುಂಟಿ ಭೂಮಿ ಪೂಜೆ ನೆರವೇರಿಸಿದರು.

ಇದೇ ಸಂದರ್ಭದಲ್ಲಿ ಅಭಿವೃದ್ಧಿ ಸಮೀತಿ ಅಧ್ಯಕ್ಷ ಗಿರಿಮಲ್ಲಪ್ಪ ಹಂಚಿನಾಳ, ತಳಗಿಹಾಳ ಕರಾಡೆ, ಪ್ರಾಚಾರ್ಯ ಎಸ್. ಆರ್. ನಾಯ್ಕೋಡಿ, ಹಿರಿಯ ಉಪನ್ಯಾಸಕ ಎಂ. ಎಲ್. ಪಾಟೀಲ, ಸಿ. ಎಂ. ಹೆರಕಲ್, ಮಹಿಳಾ ಪ್ರಥಮ ದರ್ಜೆ ಮಹಾವಿದ್ಯಾಲಯದ ಪ್ರಾಚಾರ್ಯೆ ಸುನಂದಾ ಶಿರೂರ, ಪ್ರಾಚಾರ್ಯ ಮಹಾಂತೇಶ ನರಸಗೊಂಡ, ಅಜಯ ಕಡಪಟ್ಟಿ, ಯಮನೂರಮೂಲಂಗಿ,ಪ್ರದೀಪಮಹಾಲಿಂಗಪೂರ ಸಹಿತ ಹಲವರು ಉಪಸ್ಥಿತರಿದ್ದರು.

## ರೈತರಿಗೆ ನಿರಂತರ 7 ಗಂಟೆ ವಿದ್ಯುತ್ ಪೂರೈಕೆ

**ಬಾಗಲಕೋಟೆ :** ಜಿಲ್ಲೆಯಲ್ಲಿಕೇಂದ್ರ ಮತ್ತುರಾಜ್ಯ ಸರಕಾರಗಳ ಸಹಯೋಗದಲ್ಲಿ ಪ್ರಧಾನಮಂತ್ರಿ ಕುಸುಮ ಬಿ ಮತ್ತು ಸಿ ಯೋಜನೆಗಳನ್ನು ಸಮರ್ಪಕವಾಗಿ ಜಾರಿಗೊಳಿಸಿ ಅನುಷ್ಠಾನಗೊಳಿಸಲಾಗುತ್ತಿದೆ.

ಈ ಯೋಜನೆಯಡಿರೈತರಿಗೆ ಹಗಲು ವೇಳೆಯಲ್ಲಿ 7 ಗಂಟೆ ವಿದ್ಯುತ್ ಪೂರೈಕೆ ಮಾಡಲಾಗುತ್ತಿದೆ.

ಪ್ರಧಾನಮಂತ್ರಿ ಕುಸುಮ ಬಿ ಯೋಜನೆಯಡಿ 50 ನೀರಾವರಿ ಪಂಪಸೆಟ್‌ಗಳಪೈಕಿ24ನೀರಾವರಿ ಪಂಪಸೆಟಗಳಿಗೆ ಸೌರಶಕ್ತಿಚಾಲಿತ ಪಂಪಸೆಟ್ ಅಳವಡಿಸಲಾಗಿದೆ. ಉಳಿದ ಫಲಾನುಭವಿಗಳ ಕಾಮಗಾರಿ ಪ್ರಗತಿಯಲ್ಲಿದೆ.ಈ ಯೋಜನೆಯಿಂದ ರೈತರಿಗೆ ಹಗಲು ವೇಳೆ ನಿರಂತರ ವಿದ್ಯುತ್ ಪೂರೈಸಲಾಗುತ್ತಿದೆ.ಸೌರಮಿತ್ರ ಪೋರ್ಟಲ್ ಮೂಲಕ 1083 ರೈತರು ಸೋಲಾರ ಪಂಪ ಸೆಟ್ ಅಳವಡಿಸಿಕೊಳ್ಳಲು ನೋಂದಾಯಿಸಿಕೊಂಡಿದ್ದು,ಸ್ಥಳಪರಿಶೀಲನೆ ಕಾರ್ಯ ಪ್ರಗತಿಯಲ್ಲಿದೆ.

ಪ್ರಧಾನಮಂತ್ರಿ ಕುಸುಮ ಸಿ ಯೋಜನೆಯಡಿಜಿಲ್ಲೆಯಲ್ಲಿಒಟ್ಟು 11 ವಿದ್ಯುತ್ ಉಪ ಕೇಂದ್ರಗಳ ಮೂಲಕ 28 ವಿದ್ಯುತ್ ಮಾರ್ಗಗಳನ್ನು ಸೌರೀಕರಣಗೊಳಿಸಲು ಉದ್ದೇಶಿಸಿ 55.89 ಮೆಗಾ ವ್ಯಾಟ್ ವಿದ್ಯುತ್‌ಉತ್ಪಾದನೆಗುರಿ ಹೊಂದಲಾಗಿದೆ.2025 ಮೇ ತಿಂಗಳಲ್ಲಿ ಮೊದಲ ಬಾರಿಗೆ ಮುಧೋಳ ತಾಲೂಕಿನ ಲೋಕಾಪೂರ ಉಪವಿಭಾಗದ 110/11 ಕೆವಿ ಹಲಕಿ ವಿದ್ಯುತ್ ಉಪ ಕೇಂದ್ರದಲ್ಲಿ11 ಕೆವಿ ಮಾರ್ಗ ಸೌರೀಕರಣಗೊಳಿಸಿ ಚಾಲನೆ ನೀಡಲಾಗುವುದು. ಅದರಿಂದ 0.52 ಮೆಗಾ ವ್ಯಾಟ್‌ಉತ್ಪಾದನೆಯಾಗಲಿದ್ದು, ಹಗಲು ವೇಳೆ ನಿರಂತರ 7 ತಾಸು ನೀರಾವರಿ ಮಾರ್ಗಕ್ಕೆ ವಿದ್ಯುತ್ ಪೂರೈಸಲಾಗುತ್ತದೆಎಂದು ಬಾಗಲಕೋಟೆ ಹೆಸ್ಕಾಂ ಅಧೀಕ್ಷಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಶಿಕ್ಷಣ ತಜ್ಞ ಬಾಳಗೌಡ ದೊಡಬಂಗಿ ಅವರಿಗೆ ಸನ್ಮಾನ



**ಬೆಳಗಾವಿ :** ವಿಶ್ವ ಬಸವ ಜಯಂತಿಯ ಅಂಗವಾಗಿ ಬೆಂಗಳೂರಿನ ಕೇಂದ್ರ ಬಸವ ಸಮಿತಿಯವರು ಕಿತ್ತೂರು ಚೆನ್ನಮ್ಮಾಜಿ ಅವರ ಐಕ್ಯ ಸ್ಥಳವಾದ ಬೈಲಹೊಂಗಲದಲ್ಲಿ ಏರ್ಪಡಿಸಿದ್ದ ರಾಜ್ಯಮಟ್ಟದ ಕವಿಗೋಷ್ಠಿಯಲ್ಲಿ ಭಾಗವಹಿಸಿ ಅತ್ಯುತ್ತಮ ಸ್ಥಾನ ಗಳಿಸಿದ ಬೆಳಗಾವಿಯ ಕವಿ, ಬರಹಗಾರ, ಮತ್ತು ಸಮಾಜಶಾಸ್ತ್ರ ವಿಷಯದ ನಿವೃತ್ತ ಉಪನ್ಯಾಸಕ ಬಾಳಗೌಡ ದೊಡಬಂಗಿ ಅವರನ್ನು ಜಾಗತಿಕ ಲಿಂಗಾಯತ ಮಹಾಸಭಾ ಬೆಳಗಾವಿ ತಾಲೂಕು ಘಟಕದ ಪ್ರಧಾನ ಕಾರ್ಯದರ್ಶಿ ಆನಂದ ಯಲ್ಲಪ್ಪ ಕೊಂಡಗುರಿ ಅವರು ಸನ್ಮಾನ ಪತ್ರ ಮತ್ತು ಮಹಾನ್ ದಾರ್ಶನಿಕ ಬಸವಣ್ಣ ಗ್ರಂಥವನ್ನು ಅರ್ಪಿಸಿ ಗೌರವಿಸಿದರು.

ಈ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಜಿಲ್ಲಾಧ್ಯಕ್ಷ ಮೋಹನ ಬಸನಗೌಡ ಪಾಟೀಲ ಅವರು ಉಪಸ್ಥಿತರಿದ್ದರು.

## ಭಾರತೀಯ ಸೈನಿಕರಿಗಾಗಿ ರಕ್ತದಾನ ಶಿಬಿರ ಯೂಥ ಕಾಂಗ್ರೆಸ್ ಘಟಕದಿಂದ ಆಯೋಜನೆ




**ಚಿಮ್ಮಡ :** ಜಮ್ಮು ಮತ್ತು ಕಾಶ್ಮೀರ ಹಾಗೂ ಭಾರತದ ಗಡಿ ಭಾಗದಲ್ಲಿ ಪಾಕಿಸ್ಥಾನದ ಷಡ್ಯಂತ್ರದಿಂದ ನಡೆಯುತಿರುವ ಧಾಳಿಯಲ್ಲಿ ಗಾಯಾಳುಗಳಾಗಿರುವ ಸೈನಿಕರಿಗಾಗಿ ಅವಶ್ಯವಿರುವ ರಕ್ತವನ್ನು ಪೋರೈಸಲು ಚಿಮ್ಮಡ ಗ್ರಾಮದಲ್ಲಿ ಬ್ರಹತ್ ರಕ್ತದಾನ ಶಿಬಿರ ರವಿವಾರ ಹಮ್ಮಿಕೊಳ್ಳಲಾಗಿತ್ತು.

ಇಲ್ಲಿನ ಗ್ರಾಮ ಪಂಚಾಯತಿ ಆವರಣದಲ್ಲಿ ಕರ್ನಾಟಕ ರಾಜ್ಯ ರಕ್ತಚಾಲನಾ ಪರಿಷತ್ತು, ಮುಧೋಳದ ರಾಮನಗೌಡ ಆಸ್ಪತ್ರೆಯ ರಕ್ತನಿಧಿ ಭಂಡಾರದ ಸಂಚಾರಿ ರಕ್ತದಾನ ಘಟಕದಲ್ಲಿ ತೇರದಾಳ ಮತಕ್ಷೇತ್ರದ ಯೂಥ್ ಕಾಂಗ್ರೆಸ್ ಸಮೀತಿಯ ಆಶ್ರಯದಲ್ಲಿ ಹಮ್ಮಿಕೊಳ್ಳಲಾದ ಬ್ರಹತ್ ರಕ್ತದಾನ ಶಿಬಿರದಲ್ಲಿ ಸುಮಾರು ನೂರಕ್ಕೂ ಹೆಚ್ಚು ಜನ ಯುವಕರು ರಕ್ತದಾನ ಮಾಡುವುದರ ಮೂಲಕ ಸಾರ್ಥಕತೆ ಮೆರೆದರು. ಕಳೆದ ಎರಡು ದಿನಗಳಿಂದ ಸಾಮಾಜಿಕ ಜಾಲತಾಣದಲ್ಲಿ ಹಾಗೂ ಮೈಕ್ ಧ್ವನಿ ವರ್ದಕದ ಮೂಲಕ ಗ್ರಾಮದ ಪ್ರತಿಯೊಂದು ವಾರ್ಡಗಳಲ್ಲಿ ನಡೆಸಿದ ಪ್ರಚಾರದ ಫಲವಾಗಿ ನೂರಾರು ಜನ ಯುವಕರು ಮತ್ತು ಯುವತಿಯರು ರಕ್ತದಾನ ಮಾಡಲು ಮುಂದಾಗಿದ್ದು ಪ್ರತಿಯೊಬ್ಬ ರಕ್ತದಾನಿಗಳಿಗೆ ನೆನಪಿನ ಕಾಣಿಕೆ ಮತ್ತು ಪ್ರಮಾಣಪತ್ರ ನೀಡಿ ಗೌರವಿಸಲಾಗಿದೆ ಎಂದು ತೇರದಾಳ ಮತಕ್ಷೇತ್ರದ ಯುವ ಕಾಂಗ್ರೆಸ್ ಅಧ್ಯಕ್ಷ ಪ್ರವೀಣ ಪೂಜಾರಿ ತಿಳಿಸಿದ್ದಾರೆ.

ಕಾಂಗ್ರೆಸ್ ಗ್ರಾಮ ಘಟಕದ ಉಮೇಶ ಪೂಜಾರಿ, ರಾಜ್ಯ ಯುವ ಕಾಂಗ್ರೆಸ್ ಪ್ರದಾನ ಕಾರ್ಯದರ್ಶೀ ಸೂರಜ ಅವಟಿ, ಮಾಜಿ ಸೈನಿಕ ಮಹಾಲಿಂಗಪ್ಪ ಬಳಗಾರ, ಅಶೋಕ ಮೋಟಗಿ, ಗ್ರಾ.ಪಂ. ಸದಸ್ಯ ಬಾಳಪ್ಪ ಗಡೆಪ್ಪನವರ, ಶ್ರೀಶೈಲ ಮಠಪತಿ, ಅಶೋಕ ಚಿಮ್ಮಡ, ಎಸ್ಡಿಎಂಸಿ ಅಧ್ಯಕ್ಷ ಪ್ರಭು ದೇವಗೋಳ, ಮಹಾದೇವ ಅಥಣಿ ಸೇರಿದಂತೆ ಹಲವಾರು ಜನ ಪ್ರಮುಖರು ಈ ಸಂಧರ್ಬದಲ್ಲಿ ಉಪಸ್ಥಿತರಿದ್ದರು.

## ಬಳ್ಳಾರಿ ಗ್ರಾಮೀಣ ಪೊಲೀಸ್ ಠಾಣೆ ಅಧಿಕಾರಿಗಳಿಂದ ಕಳ್ಳನ ಬಂಧನ ವಿವಿಧ ಕಂಪನಿಯ 30 ದ್ವಿಚಕ್ರ ವಾಹನಗಳ ಜಪ್ತಿ



**ಬಳ್ಳಾರಿ :** ನಗರದಲ್ಲಿ ಇತ್ತೀಚಿಗೆ ಹೆಚ್ಚಿನ ರೀತಿಯಲ್ಲಿ ಮೋಟರ್ ಸೈಕಲ್‌ಗಳ ಕಳ್ಳತನ ಬಗ್ಗೆ ವರದಿಯಾಗಿದ್ದು, ಈ ಬಗ್ಗೆ ಆರೋಪಿ ಪತ್ತೆಗಾಗಿ ಜಿಲ್ಲಾ ಎಸ್.ಪಿ ಡಾ. ಶೋಭಾರಾಣಿ ವಿ.ಜೆ ರವರ ಮಾರ್ಗದರ್ಶನದಲ್ಲಿ ಮತ್ತು ಹೆಚ್ಚುವರಿ ಪೊಲೀಸ್ ಅಧೀಕ್ಷಕರಾದ ಎಸ್.ನವೀನ್ ಕುಮಾರ್ ರವರ ಮತ್ತು ಸಿರುಗುಪ್ಪ ಉಪ-ವಿಭಾಗದ ಪೊಲೀಸ್

ಉಪಾಧೀಕ್ಷಕರಾದ ವೆಂಕಟೇಶ್ ರವರ ನೇತೃತ್ವದಲ್ಲಿ, ಬಳ್ಳಾರಿ ಗ್ರಾಮೀಣ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ರವರಾದ ಎನ್.ಸತೀಶ್ ರವರ ನಾಯಕತ್ವದಲ್ಲಿ, ಹೊನ್ನಪ್ಪ ಪಿ.ಎಸ್.ಐ ಹಾಗೂ ಹೆಚ್.ಸಿ ಗಳಾದ ಖಾಜಾ ಮೋದ್ದೀನ್ ಹೆಚ್.ಸಿ ಶ್ರೀನಿವಾಸ, ಹೆಚ್.ಸಿ, ಬೀರಪ್ಪ ಹೆಚ್.ಸಿ, ಪ್ರಕಾಶ ಹೆಚ್.ಸಿ ಪಿ.ಸಿ ಗಳಾದ ರಮೇಶ್ ಪಿ.ಸಿ ಫಕ್ಕಿರೇಶ ಪಿ.ಸಿ, ಮಂಜುನಾಥ ಪಿ.ಸಿ, ಮಾರ್ಕ ಪಿ.ಸಿ, ಪರಶುರಾಮ ಪಿ.ಸಿ, ಚೇತನ್ ಪಿ.ಸಿ ರವರೊನ್ನೊಳಗೊಂಡ ತಂಡ ರಚನೆ ಮಾಡಿದ್ದು, ಈ ತಂಡವು ಪತ್ತೆಕಾರ್ಯದಲ್ಲಿ ನಿರತರಾಗಿದ್ದಾಗ ಮೇ 13ರಂದು ಠಾಣಾ ವ್ಯಾಪ್ತಿಯಲ್ಲಿ ಸಂಶಯಾಸ್ಪದ ರೀತಿಯಲ್ಲಿ ಮೋಟರ್ ಸೈಕಲ್‌ನ್ನು ಚಲಾಯಿಸುತ್ತಿದ್ದ ಪ್ರಹ್ಲಾದ ವಾಸ ರೂಪನಗುಡಿ ರಾಯಪುರ ಗ್ರಾಮವಾಗಿದ್ದು, ಈತನನ್ನು ಬಂಧಿಸಿ ವಿಚಾರಿಸಲಾಗಿ ತನ್ನ ತಪ್ಪನ್ನು ಒಪ್ಪಿಕೊಂಡಿರುತ್ತಾನೆ ದಸ್ತಗಿರಿಯಾದ ಆರೋಪಿ ಕಡೆಯಿಂದ ಸುಮಾರು 30 ವಿವಿಧ ಕಂಪನಿಗಳ ಬೈಕ್ಗಳನ್ನು ವಶಪಡಿಸಿಕೊಳ್ಳಲಾಗಿದೆ. ಆ ವ್ಯಕ್ತಿಯನ್ನು ವಶಕ್ಕೆ ಪಡೆದು ವಿಚಾರಣೆ ಕೈಗೊಂಡಿದ್ದು, ಸದರಿ ವ್ಯಕ್ತಿಯು ಬಳ್ಳಾರಿ ಗ್ರಾಮೀಣ ಪೊಲೀಸ್ ಠಾಣೆ ಸರಹದ್ದು ಮತ್ತು ಜಿಲ್ಲೆಯ ವಿವಿಧ ಠಾಣೆಗಳ ವ್ಯಾಪ್ತಿಯಲ್ಲಿ ಮೋಟರ್ ಸೈಕಲ್‌ಗಳನ್ನು ಕಳ್ಳತನ ಮಾಡಿದ್ದಾಗಿ ಮಾಹಿತಿ ತಿಳಿಸಿದ್ದರಿಂದ ಈತನ ಕಡೆಯಿಂದ ವಿವಿಧ ಕಂಪನಿಯ ಒಟ್ಟು 30 ದ್ವಿಚಕ್ರ ವಾಹನಗಳನ್ನು ಜಪ್ತು ಮಾಡಿಕೊಳ್ಳಲಾಗಿರುತ್ತದೆ ವಶಪಡಿಸಿಕೊಂಡ ದ್ವಿಚಕ್ರ ವಾಹನಗಳ ಅಂದಾಜು ಮೌಲ್ಯ ರೂ ಹತ್ತು ಲಕ್ಷ ರೂಪಾಯಿಗಳು ಆಗಿರುತ್ತದೆ ಎಂದು ತಿಳಿದು ಬಂದಿದೆ. ಪತ್ತೆ ಕಾರ್ಯದಲ್ಲಿ ಭಾಗವಹಿಸಿದ ಅಧಿಕಾರಿ ಹಾಗೂ ಸಿಬ್ಬಂದಿಗಳಿಗೆ ಜಿಲ್ಲಾ ಪೊಲೀಸ್ ಅಧೀಕ್ಷಕರು, ಬಳ್ಳಾರಿ ರವರು ಪ್ರಶಂಸೆ ಮತ್ತು ಬಹುಮಾನವನ್ನು ಘೋಷಿಸಿರುತ್ತಾರೆ.

## ಜಾತಿ ಜನಗಣತಿ ಸಮೀಕ್ಷೆಗೆ ಹೆಚ್ಚಿನ ಸಿಬ್ಬಂದಿ ನಿಯೋಜನೆಗಾಗಿ ಬಿಎಸ್ಪಿ. ಒತ್ತಾಯ




**ಬಾಗಲಕೋಟೆ :** ಜಾತಿ ಜನಗಣತಿ ಸಮೀಕ್ಷೆಗೆ ಹೆಚ್ಚಿನ ಸಿಬ್ಬಂದಿ ನಿಯೋಜನೆ ಮಾಡಬೇಕೆಂದು ಆಲ್ ಇಂಡಿಯಾ ಬಹುಜನ ಸಮಾಜ ಪಕ್ಷದ ರಾಜ್ಯ ಉಪಾಧ್ಯಕ್ಷ ವೈ.ಸಿ. ಕಾಂಬಳೆ ಅವರು ರಾಜ್ಯ ಸರ್ಕಾರವನ್ನು ಒತ್ತಾಯಿಸಿದರು.

ನಗರದಲ್ಲಿಸೋಮವಾರಸುದ್ದಿಗೋಷ್ಠಿನಡೆಸಿದ ಅವರು,"ಒಳಮೀಸಲಾತಿಗಾಗಿನಡೆಯುತ್ತಿರುವ ಜಾತಿ ಗಣತಿ ಮಹತ್ವದ ಕಾರ್ಯವಾಗಿದೆ. ಈ ಕಾರ್ಯಕ್ಕೆ ಎಸ್ಸಿ ಕಾಲೋನಿಗಳಲ್ಲಿ ಸೂಕ್ತವಾದ, ಪ್ರಯತ್ನಶೀಲ ಸಿಬ್ಬಂದಿಯನ್ನು ನಿಯೋಜಿಸಬೇಕಾಗಿದೆ. ಸರ್ಕಾರ ಇದನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು ಮತ್ತು ಆದ್ಯತೆ ನೀಡಬೇಕು," ಎಂದರು.

ಸಮೀಕ್ಷೆಯ ಸಂದರ್ಭದಲ್ಲಿ ಕೆಲವು ವ್ಯಕ್ತಿಗಳು ತಮ್ಮನ್ನು ಎಸ್ಸಿ ಎಂದು ಸುಳ್ಳು ಮಾಹಿತಿ ನೀಡುತ್ತಿರುವ ಕುರಿತು ಆತಂಕ ವ್ಯಕ್ತಪಡಿಸಿದ ಕಾಂಬಳೆ, "ಇದಕ್ಕೆ ಸಂಬಂಧಿಸಿದ ಅಧಿಕಾರಿಗಳು ಎಚ್ಚರಿಕೆಯಿಂದ ಇರಬೇಕು. ಸರಿಯಾದ ಪರಿಶೀಲನೆಯೊಂದಿಗೆ ಗಣತಿ ಮಾಡಬೇಕಾಗಿದೆ," ಎಂದರು.

ಸಮೀಕ್ಷೆಗೆ ನೀಡಲಾಗಿರುವ ಅವಧಿ ಪರ್ಯಾಯವಾಗಿ ಕಡಿಮೆವಾಗಿರುವುದರಿಂದ ದಿನಾಂಕವನ್ನು ವಿಸ್ತರಿಸಬೇಕೆಂದು ಅವರು ಸರ್ಕಾರವನ್ನು ಒತ್ತಾಯಿಸಿದರು. "ಸಂವಿಧಾನಾತ್ಮಕ ಹಕ್ಕುಗಳ ಅನುಷ್ಠಾನಕ್ಕಾಗಿ ಮತ್ತು ಮೀಸಲಾತಿಯ ಸದುಪಯೋಗ ಪಡೆಯಲುಈಸಮೀಕ್ಷೆಅತ್ಯಂತಅವಶ್ಯಕವಾಗಿದೆ. ಅಧಿಕಾರಿಗಳು ಮನೆ ಮನೆಗೆ ಬಂದಾಗ ಜನರು ನಿಖರ ಮಾಹಿತಿ ನೀಡಬೇಕು," ಎಂದು ಅವರು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಪಕ್ಷದ ಪ್ರಮುಖರಾದ ಗುರುಶಾಂತಪ್ಪ, ಮಂಜುನಾಥ, ಅಶೋಕ ರಾಜಾಪುರ, ಶಂಕತ ಚಂದಾವರಿ ಮತ್ತು ನಾಗೇಶ ಚಂದಾವರಿ ಉಪಸ್ಥಿತರಿದ್ದರು.

## ಸಿಬಿಎಸ್‌ಇ ಬೋರ್ಡ್ ಪರೀಕ್ಷೆಯಲ್ಲಿ ಶ್ರೀ ಚೈತನ್ಯ ಟೆಕ್ನೋ ಶಾಲೆಗೆ ಅದ್ಭುತ ಫಲಿತಾಂಶ




**ಹೊಸಪೇಟೆ-ವಿಜಯನಗರ :** ಕಳೆದ ವರ್ಷಗಳ ದಾಖಲೆಯನ್ನು ಮುಂದುವರೆಸಿರುವ ಶ್ರೀ ಚೈತನ್ಯ ಟೆಕ್ನೋ ಹೊಸಪೇಟೆ ಶಾಲೆಯು 2024-25 ನೇ ಸಾಲಿನ ಹತ್ತನೇ ತರಗತಿಯ ಸಿ.ಬಿ.ಎಸ್.ಇ ಬೋರ್ಡ್ ಪರೀಕ್ಷೆಗಳಲ್ಲಿ ಅದ್ಭುತ ಪ್ರದರ್ಶನ ನೀಡಿದೆ ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿಯ ಸಿ ಬಿ ಎಸ್ ಇ 10ನೇ ತರಗತಿಯ ಪರೀಕ್ಷೆಯಲ್ಲಿ ಶ್ರೀ ಚೈತನ್ಯ ಟೆಕ್ನೋ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದ ವಿದ್ಯಾರ್ಥಿಗಳು ಅತ್ಯುತ್ತಮ ಸಾಧನೆ ಮಾಡಿದ್ದಾರೆ .10ನೇ ತರಗತಿಯ ದೇವೇಶ್ ಎಸ್ ಪಥಕ್ ಹಾಗೂ ಸಾಯಿ ವಿಶಾಲ್ (98%) ,ಹೃದಯ ಮನ್ನೆ (97%) ,ಕೃಷ್ಣ ಚೈತನ್ಯ ಹಾಗೂ ತೇಜ ಶ್ರೀನಿವಾಸ್ ಮತ್ತು ಮಾನ್ಸಿ (96%) ,ಅಕ್ಷಯ್ (95%) ಮತ್ತು 90%ಕ್ಕಿಂತ ಹೆಚ್ಚು ಅಂಕಗಳನ್ನು 25 ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಪಡೆದಿದ್ದಾರೆ ಎಂದು ತಿಳಿಸಲು ತುಂಬಾ ಹೆಮ್ಮೆ ಪಡುತ್ತಾರೆ . ಕ್ಷೇತ್ರ ಜಿಲ್ಲಾಧಿಕಾರಿಗಳಾದ ಎಂ ಎಸ್ ,ದಿವಾಕರ್ ಅವರು ಸಾಧನೆಗೈದ ಮಕ್ಕಳಿಗೆ ಹಾಗೂ ಪೋಷಕರಿಗೆ ಸನ್ಮಾನಿಸುವುದರ ಜೊತೆಗೆ ಅಭಿನಂದನೆಗಳನ್ನು ತಿಳಿಸಿದ್ದಾರೆ ವಿದ್ಯಾರ್ಥಿಗಳ ಈ ಸಾಧನೆಗೆಪೋಷಕರುಶಿಕ್ಷಣಸಂಸ್ಥೆಯಸಿಬ್ಬಂದಿಮತ್ತು ಆಡಳಿತ ಮಂಡಳಿ ಸದಸ್ಯರು ಸಂತಸ ವ್ಯಕ್ತ ಪಡಿಸಿದ್ದಾರೆ ಶ್ರೀ ಚೈತನ್ಯ ಶೈಕ್ಷಣಿಕ ಸಂಸ್ಥೆಗಳ ನಿರ್ದೇಶಕಿ ಸುಷ್ಮಾ ಬೊಪ್ಪಣ ಅವರು ಸಿಬಿಎಸ್‌ಇ 10ನೇ ತರಗತಿಯ ಪರೀಕ್ಷೆಯಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಅಭಿನಂದಿಸಿದ್ದ ಶಾಲಾ ಪ್ರಾಂಶುಪಾಲರು ಎಜಿಎಂ ಶಿಕ್ಷಕ ಬಳಗದವರು ಹೃತ್ಪೂರ್ವಕ ಅಭಿನಂದನೆಗಳನ್ನು ತಿಳಿಸಿದ್ದಾರೆ.

**"SIHI KAHI"** Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State